ಬೆಳಕು ಚೆಲ್ಲುವಂಥ ಹಲವಾರು ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದು ಸಹಜ. ಯಾವುದೇ ವಿಚಾರ ಇರಲಿ, ತಾವೆಲ್ಲ ಬಹಳಷ್ಟು ಅನುಭವಸ್ಥರು ಇರುವುದರಿಂದ ಆವೇಶಕ್ಕೆ ಒಳಗಾಗದೆ, ಭಾವೋದ್ರೇಕವನ್ನು ವ್ಯಕ್ತಪಡಿಸದೆ ಕಾನೂನಿನ ಚೌಕಟ್ಟಿನಲ್ಲಿ ಸಲೀಸಾಗಿ ಈ ಸದನದಿಂದ ತಾವು ಉತ್ತರವನ್ನು ಪಡೆಯಬಹುದು. ಸರ್ಕಾರದ ಪರವಾಗಿ ನಮ್ಮ ಸಚಿವರು ಉತ್ತರವನ್ನು ಕೊಡುವುದಕ್ಕೆ ತಾವೆಲ್ಲ ಸಹಕರಿಸಬೇಕು ಹಾಗೆಯೇ ಮಾನ್ಯ ಸದಸ್ಯರುಗಳು ಕೇಳಿದ ಪ್ರಶ್ನೆಗಳ ಬಗ್ಗೆ, ಪ್ರಸ್ತಾಪ ಮಾಡಿದಂಥ ಅನೇಕ ವಿಷಯಗಳ ಬಗ್ಗೆ ನಮ್ಮ ಮಂತ್ರಿಗಳು ಕೂಡ ಅಷ್ಟೇ ಜವಾಬ್ದಾರಿಯಿಂದ ಉತ್ತರವನ್ನು ಕೊಡುವುದಕ್ಕೆ ಮುಂದಾಗಬೇಕು ಮತ್ತು ಮುಂದಾಗುತ್ತಾರೆ. ರಾಜ್ಯದ ಜನತೆಯ ಕಷ್ಟಕಾರ್ಪಣ್ಯಗಳನ್ನು, ರಾಜ್ಯದಲ್ಲಿ ನಡೆಯುತ್ತಿರುವಂಥ ಹಲವಾರು ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ಈ ಸದನ ಅತ್ಯುತ್ತಮವಾದ ಸ್ಥಳವಾಗಿದೆ. ಈ ಸದನದ ಸಮಯವನ್ನು ವೃಥಾ ವ್ಯರ್ಥಮಾಡದೆ, ಸಾರ್ವಜನಿಕರ ಹಣವನ್ನು ಕೂಡ ಇಲ್ಲಿ ಅನಾವಶ್ಯಕವಾಗಿ ವ್ಯಯ ಮಾಡದೆ, ನಾವು ಸಮಯೋಜಿತವಾಗಿ ವರ್ತಿಸಿ ಉಭಯ ಪಕ್ಷದವರು ಕೂಡ ಇಲ್ಲಿ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯವಸ್ಥಿತವಾಗಿ ಕಾನೂನಿನ ಚೌಕಟ್ಟಿನಲ್ಲಿ, ಸದನದ ವ್ಯಾಪ್ತಿಯಲ್ಲಿ ಬರುವಂಥ ವಿಷಯವನ್ನು ಮಂಡಿಸಿ ಉತ್ತರ ಪಡೆಯಬಹುದು. ಯಾರೂ ಕೂಡ ಯಾವುದೇ ಆವೇಶಕ್ಕೆ ಒಳಗಾಗಬಾರದು, ನೀವೆಲ್ಲಾ ಬಹಳಷ್ಟು ಅನುಭವಸ್ಥರಿರುವುದರಿಂದ ನಿಮಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಒಟ್ಟಿನಲ್ಲಿ ಈ ಸದನದ ಘನತೆ, ಗೌರವ, ಪರಂಪರೆಯನ್ನು ನಾವು ಮುಂದುವರೆಸಿಕೊಂಡು ಹೋಗುವಲ್ಲಿ ಯಾವುದೇ ರೀತಿಯ ಚ್ಯುತಿ ಆಗದಂತೆ, ಸದಸ್ಯರ ಹಕ್ಕು ನಷ್ಟ ಆಗದ ರೀತಿಯಲ್ಲಿ, ಸರ್ಕಾರವನ್ನು ವೃಥಾ ಪೇಚಿಗೆ ಸಿಕ್ಕಿಸುವಂಥ ರೀತಿಯಲ್ಲಿ ಸದಸ್ಯರು ಮುಂದಾಗಬಾರದು. ಆದರೆ ವಿರೋಧ ಪಕ್ಷದ ಸದಸ್ಯರು ಕೇಳುವಂಥ ಪ್ರಶ್ನೆಗಳಿಗೆ ಅಥವಾ ಅವರು ಪ್ರಸ್ತಾಪ ಮಾಡುವಂಥ ಅನೇಕ ವಿಚಾರಗಳಿಗೆ ಸರಿಯಾದ ಸಮಯದಲ್ಲಿ ಉತ್ತರವನ್ನು ಒದಗಿಸಿದರೆ ಅದಕ್ಕೆ ಒಳ್ಳೆಯ ಮೆರಗು ಬರುತ್ತದೆ.

11.00 ಎ ಎಂ

ತಮ್ಮೆಲ್ಲರ ಸಹಕಾರದಿಂದ ನಾನು ಖಂಡಿತವಾಗಿಯೂ ಈ ಒಂದು ಸದನದಲ್ಲಿ ಒಳ್ಳೆಯ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಆಗುತ್ತದೆ, ತಮ್ಮೆಲ್ಲರ ಸಹಕಾರ, ಬೆಂಬಲಬೇಕು ಎಂದು ಕೇಳಿಕೊಂಡು ಎಲ್ಲರಿಗೂ ವಂದಿಸಿ, ನನ್ನನ್ನು ಈ ಸ್ಥಾನಕ್ಕೆ ತರಲು ಎಲ್ಲರೂ ಇವತ್ತು ಒಮ್ಮತದಿಂದ ನಿರ್ಣಯಕ್ಕೆ ಬಂದಿದ್ದಕ್ಕಾಗಿ ಮತ್ತೊಮ್ಮೆ ವಂದಿಸಿ, ಮುಂದಿನ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡೋಣವೆಂದು ತಿಳಿಸಲಿಚ್ಛಿಸುತ್ತೇನೆ.

4. ನಿಲುವಳಿ ಸೂಚನೆ- (ಮೊದಲನೇ ಅನುಮತಿ ಕೋರಿಕೆ)

ವಿಷಯ : ಭಾರಿ ಮಳೆ ಹಾನಿಯಿಂದಾಗಿ ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಹಾನಿ ಉಂಟಾಗಿರುವುದು

+ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಅಧ್ಯಕ್ಷರೆ, ನಾನು ಮತ್ತು ನಮ್ಮ ಪಕ್ಷದ ನಾಯಕರಾದ ಶ್ರೀ ಸಿ. ಭೈರೇಗೌಡರವರು, ಬಚ್ಚೇಗೌಡರವರು ರಾಜ್ಯದಲ್ಲಿ ಮಳೆ ಹಾನಿಯಿಂದ

ಅಪಾರವಾದ ಹಾನಿಯಾಗಿರುವ ಬಗ್ಗೆ ನಿಲುವಳಿ ಸೂಚನಾ ಪತ್ರವನ್ನು ಮಾನ್ಯ ಅಧ್ಯಕ್ಷರ ಕೊಠಡಿಗೆ ಹೋಗಿ ಇವತ್ತು ಬೆಳಿಗ್ಗೆ ಕೊಟ್ಟು, ಅಧ್ಯಕ್ಷರನ್ನು ಭೇಟಿ ಮಾಡಿ ನಿಲುವಳಿ ಸೂಚನೆಯನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿದೆವು. ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಲು ಆಗದೇ ಹೋದರೂ ಸಹ, ರಾಜ್ಯದಲ್ಲಿ ಮಳೆ ಹಾನಿಯಿಂದಾಗಿರುವ ನಷ್ಟದ ಬಗ್ಗೆ ಸದನದಲ್ಲಿ ಈ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಈಗಾಗಲೇ ವಿಧಾನಪರಿಷತ್ತಿನಲ್ಲಿ ಕಂದಾಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ವರ್ಷ ನಮ್ಮ ರಾಜ್ಯದಲ್ಲಿ ನೈಸರ್ಗಿಕ ವೈಪರೀತ್ಯವಾಗಿರುವುದನ್ನು ನಾವು ನೋಡಿದ್ದೇವೆ. ಒಂದು ತಿಂಗಳ ಹಿಂದೆ ಮಳೆ ಬಾರದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿದ್ದ ಸನ್ನಿವೇಶ ಉಲ್ಬಣವಾಗಿತ್ತು. ತಮಿಳುನಾಡು ಮತ್ತು ನಮ್ಮ ರಾಜ್ಯಕ್ಕೆ ನೀರಿನ ಹಂಚಿಕೆ ಬಗ್ಗೆ ಇದ್ದ ವಿವಾದವೂ ಸಹ ಬೇರೆ ರೀತಿಯ ಒಂದು ರೂಪವನ್ನು ತೆಗೆದುಕೊಳ್ಳುವ ಪರಿಸ್ಥಿಗೆ ಹೋಗಿತ್ತು. ಆದರೆ, ಸುದೈವದಿಂದ ಒಳ್ಳೆಯ ಮಳೆಯಾಗಿದೆ. ಮಳೆಯಾಗಿದ್ದರ ಬಗ್ಗೆ ಶ್ರೀ ಹನುಮೇಗೌಡರವರು ಅವರ ಭಾಷಣದಲ್ಲಿ ರೈತರು, ಕೃಷ್ಣರವರು ಮುಖ್ಯಮಂತ್ರಿಗಳಾಗಿರುವುದಕ್ಕೆ...

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಸಿಂಧ್ಯಾರವರು ಈ ವಿಚಾರವನ್ನು ಈಗಾಗಲೇ ಸದನದ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕಂದಾಯ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಹೇಳಿಕೆ ಮಾಡಲಿ, ನಂತರ ಏನಾದರೂ ಅನುಮಾನಗಳಿದ್ದರೆ ಪರಿಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ತಾವು ಹೇಳುವುದು ಸರಿ. ನಾನು ಹೇಳಿದನಂತರ ಅವರು ಹೇಳಲಿ. ಹನುಮೇಗೌಡರು ಕೃಷ್ಣ ಅವರು ಮುಖ್ಯಮಂತ್ರಿಗಳು ಆದರು, ಆದರಿಂದಾಗಿ ಒಳ್ಳೆಯ ಮಳೆಯಾಯಿತು ಎಂದು ಹೇಳಿದ್ದಾರೆ. ಸಂತೋಷದ ವಿಚಾರ. ಮಳೆಯಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ : ದೇವರ ಪೂಜೆಗೆಂದು ಇಂಟೀರಿಯರ್‌ನಲ್ಲಿರುವ ಒಂದು ಹಳ್ಳಿಗೆ ಹೋಗಿದ್ದಾಗ ಅರ್ಚಕರು ನನ್ನನ್ನು ಪರಿಚಯ ಮಾಡಿಕೊಟ್ಟರು. ಅವರು, 23 ವರ್ಷಗಳಿಂದ ಈ ಭಾಗದ ಕೆರೆ ತುಂಬಿರಲಿಲ್ಲ, ಈಗ ತುಂಬಿದೆ, ಯಾರೋ ಒಳ್ಳೆಯ ಪುಣ್ಯಾತ್ಮರು ಅಧಿಕಾರಕ್ಕೆ ಬಂದಿರುವ ಶುಭಸೂಚನೆ ಇದಾಗಿದೆ ಎಂದು ಕಾಣುತ್ತದೆಂದು ಹೇಳಿದರು. ಏನೋ ಇದು ಹೀಗೇ ಮುಂದುವರೆದು ನಾವು ನೆಮ್ಮದಿಯಾಗಿ ಬಾಳುವಂಥ ಅವಕಾಶ ಬಂದರೆ ನಾನು ಅವರಿಗೆ ಮತ್ತು ಸರ್ಕಾರಕ್ಕೆ ಕೃತಜ್ಞತೆಗಳನ್ನರ್ಪಿಸುತ್ತೇನೆಂದು ರೈತರ ಪರವಾಗಿ ಹೇಳಿದರು. ಅದನ್ನೇ ನಾನು ಇಲ್ಲಿ ಹೇಳಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಹಾಗಿದ್ದರೆ, ಹನುಮೇಗೌಡರವರು ಹೇಳಿದ ಹಾಗೆ, ಸಮೃದ್ಧಿಯಾಗಿ ಅವರ ಕೆರೆಗಳಿಗೆ ಮಳೆ ಬಂದು ನೀರು ಬಂದಿದೆ. ಕೋಲಾರದಲ್ಲಿ ಒಂದು ಹನಿ ಮಳೆಯಾಗಿಲ್ಲ. ಕೆರೆಗಳಲ್ಲಿ ನೀರಿಲ್ಲ. ಹಾಗಾದರೆ, ನಮ್ಮ ನಾಯಕರು ಆಯ್ಕೆಯಾಗಿದ್ದು ಕೋಲಾರದ ಜನರು ದುರದೃಷ್ಟವಂತವೆಂದು ಹೇಳುವುದಕ್ಕಾಗುತ್ತದೆಯೇ? ಅದನ್ನೂ ಹನುಮೇಗೌಡರವರು ಹೇಳಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ನಿಮ್ಮಂಥವರೂ ಕಾರಣವಿರಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ : 8-10 ದಿವಸಗಳಲ್ಲಿ ಮಳೆ ಬಾರದಿದ್ದರೆ ಬಹಳ ತೊಂದರೆಯಾಗುತ್ತಿತ್ತು. ಬೇರೆ ಕಡೆ ಚೆನ್ನಾಗಿ ಮಳೆಯಾಗಿದೆ. ರೈತರು ಹೇಳಿದ್ದನ್ನು ಹೇಳಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಹನುಮೇಗೌಡರವರು ರೈತರು ಹೇಳಿದ ವಿಚಾರವನ್ನು ಹೇಳಿದ್ದಕ್ಕೇ ನಾನೂ ಧ್ವನಿಗೂಡಿಸಿದ್ದೇನೆ. ಒಳ್ಳೆಯ ಮಳೆಯಾಗಿದೆ, ಸಮೃದ್ಧಿಯಾಗಿದೆ ಇದು ಬಹಳ ಒಳ್ಳೆಯ ವಿಚಾರ. ಆದರೆ, ಈ ವರ್ಷ ಅತೀವೃಷ್ಟಿಯಾಗಿದೆ. ಅನಾವೃಷ್ಟಿಯಾದರೆ ಅದಕ್ಕೂ ಸಹ ಅವರೇ ಕಾರಣರೆಂದು ತಾವು ಹೇಳಲು ಬರುವುದಿಲ್ಲವೆಂದು ಹೇಳಿದೆ. ಅದೇನೇ ಇರಲಿ, ಇವತ್ತು ರಾಜ್ಯದಲ್ಲಿ ಕೋಲಾರದಲ್ಲಿ ಒಂದು ಕಡೆ ಮಳೆ ಕಡಿಮೆಯಾಗಿದೆ ಎಂದು ರೈತರು ಹೇಳುತ್ತಿದ್ದಾರೆ. ಧಾರವಾಡ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವಿಪರೀತ ಮಳೆಯಿಂದ ಮತ್ತು ಒಂದೇ ಸಾರಿ ಮಳೆ ಬಿದ್ದಿದ್ದರಿಂದ, ರೈತರಿಗೆ ಬಹಳ ಹಾನಿಯಾಗಿದೆ. ಅನೇಕ ಕೆರೆಗಳು ಒಡೆದಿವೆ, ಸಾವುಗಳಾಗಿವೆ. ಅದರ ಬಗ್ಗೆ ಸುಮಾರು 2 ಕೋಟಿ 80 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡಲಾಗಿದೆ ಎಂದು ಹೇಳಿದ್ದಾರೆ. This is a period of transition. ನಮ್ಮ ಸರ್ಕಾರ ಆಡಳಿತದಲ್ಲಿತ್ತು. ಈಗ ತಮ್ಮ ಕೈಗೆ ಅಧಿಕಾರ ಬಂದಿದೆ. ಈ ಅವಧಿಯಲ್ಲಿ ಜಿಲ್ಲಾ ಆಡಳಿತ ಯಂತ್ರ, ಇದಕ್ಕೆ ಒಂದು ಸ್ಪಷ್ಟವಾದ ಸೂಚನೆಯಿದೆ. ಮಳೆ ಬಂದ ಸಂದರ್ಭದಲ್ಲಿ ಹೀಗೆ ಮಾಡಬೇಕು, ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ತಮಗೆ ವಿವಿಧ ಜಿಲ್ಲೆಗಳಿಂದ ವರದಿ ಬಂದಿದೆ, ಯಾವ್ಯಾವ ಜಿಲ್ಲಾಧಿಕಾರಿಗಳು ಈ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ,? ಒಟ್ಟು ಎಷ್ಟು ಹಾನಿಯಾಗಿದೆ? ಎಷ್ಟು ಸಾವುಗಳಾಗಿವೆ, ಅದಕ್ಕೆ ಪರಿಹಾರವೇನು? ಎಷ್ಟು ಕುಟುಂಬಗಳಿಗೆ ಪರಿಹಾರವನ್ನು ಕೊಡಲಾಗಿದೆ? ಎಷ್ಟು ಕೆರೆಗಳು ಒಡೆದಿವೆ? ಎನ್ನುವ ಬಗ್ಗೆ ತಾವು ಈ ಸಭೆಗೆ ಅದರ ವಿವರಗಳನ್ನು ನೀಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ, ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮಳೆ ಹೆಚ್ಚಾಗಿ ಆಗಿ, ಅದನ್ನು ಪ್ರಧಾನಿಗಳು ನೋಡಿಕೊಂಡು ಬಂದಿದ್ದಾರೆ. ಮಗು ಅತ್ತಾಗಲೇ ತಾಯಿ ಹಾಲು ಕೊಡುವುದು. ಹಾಗೆಯೋ, ಕೇಂದ್ರದವರು ನಿಮ್ಮಿಂದ ರೆಪ್ರೆಂಟೇಷನ್ ಬಂದಿಲ್ಲ, ಅದಕ್ಕೆ ನಾವು ಏಕೆ ದುಡ್ಡು ಕೊಡಬೇಕೆನ್ನುವ, ಸನ್ನಿವೇಶ ಅನೇಕ ಸಂದರ್ಭಗಳಲ್ಲಿ ಬಂದಿದೆ. ಅದರಿಂದಾಗಿ, ಕೇಂದ್ರ ಸರ್ಕಾರಕ್ಕೆ ಮನವಿ ಕೊಡುವುದರ ಜೊತೆಗೆ, ತಾವು ಸಚಿವ ಸಂಪುಟದಲ್ಲಿ ಏನಾದರೂ ತೀರ್ಮಾನಿಸಿದ್ದೀರಾ? ಇದರ ಬಗ್ಗೆ ತಾವೇನಾದರೂ ಮನವಿ ಕೊಡಬೇಕೆಂಬ ಬಗ್ಗೆ ಉದ್ದೇಶವಿಟ್ಟುಕೊಂಡಿದ್ದೀರಾ? ತಾವು ಸಂಗ್ರಹಿಸಿರುವ ಅಂಕಿ- ಅಂಶಗಳೇನು? ಎಂಬ ಬಗ್ಗೆ ಈ ಸದನಕ್ಕೆ ತಿಳಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ನಮ್ಮ ಈ ಸದನದ ನಾಯಕರು ರಾಜ್ಯದಲ್ಲಿ ಮಳೆಯಿಂದಾಗಿರುವ ಹಾನಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದರ ಜೊತೆಗೆ, ನಮ್ಮ ರಾಜ್ಯದಲ್ಲಿ ಮುಂಗಾರು, ಹಂಗಾಮಿನಲ್ಲಿ ಎಷ್ಟು ಬಿತ್ತನೆಯಾಗಬೇಕಿತ್ತೋ, ಅಷ್ಟು ಪ್ರಮಾಣದಲ್ಲಿ ಈ ಸಾರಿ ಬಿತ್ತನೆ ಆಗಿಲ್ಲ. ಕೆಲವು ಕಡೆ ಮಳೆ ಹೆಚ್ಚಾಗಿ, ಹಾನಿಯಾಗಿರುವುದು ನಿಜ. ಅದು ಯಾವ ರೀತಿಯಲ್ಲಿ ಎಂದರೆ, ಈ ಸಾರಿ ವಿಶೇಷವೆಂದರೆ ಮಳೆ ಬಂತೆಂದರೆ, ಒಂದೇ ಕಡೆ ಮಳೆ ಸುರಿದಿದೆ. ಇನ್ನೊಂದು 10 ಕಿ.ಮೀ. ದೂರ ಹೋದರೆ ಒಂದು ಹನಿ ಮಳೆಯೂ ಸಹ ಆಗಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಕೊಡುವ ಸಂದರ್ಭದಲ್ಲಿ ಬಿತ್ತನೆಯಾಗದಿರುವ ಪ್ರದೇಶಗಳಲ್ಲಿ ಆ ರೈತರಿಗೆ ಏನು ಕ್ರಮ

ತೆಗೆದುಕೊಂಡಿದ್ದೀರಿ ? ಮುಂಗಾರು ಬೆಳೆ ಮುಗಿಯಿತು. ಹಿಂಗಾರು ಬೆಳೆ ಪ್ರಾರಂಭವಾಗುತ್ತದೆ. ಈಗಾಗಲೇ ಕೆಲವು ಕಡೆ ಬಿತ್ತನೆಯಾಗುತ್ತಿದೆ. ಕೆಲವು ಕಡೆ ಅದಕ್ಕೆ ಹಿಂಗಾರು ಬಿತ್ತನೆಯಾಗಿರುವುದಕ್ಕೆ ಈಗ ಮಳೆ ಬರುವುತ್ತಿರುವುದರಿಂದ ಸಾಕಷ್ಟು ಪ್ರಯೋಜನವಾಗುತ್ತದೆ. ಆದರೆ, ಮುಂಗಾರಿನಲ್ಲಿ ಬಿತ್ತನೆಯಾಗದಿರುವ ಪ್ರದೇಶಗಳಲ್ಲಿ ಅಲ್ಲಿಯ ರೈತರಿಗೆ, ದನಕರುಗಳಿಗೆ ಕುಡಿಯುವ ನೀರು ಇಲ್ಲದೆ ಅವರು ಮುಂದಿನ ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಈ ಬಾರಿ ಎರಡೂ ರೀತಿಯ ವೈಪರೀತ್ಯಗಳಾಗಿವೆ. ಇದರ ಬಗ್ಗೆ ತುರ್ತಾಗಿ ಏನೇನು ಕ್ರಮಗಳನ್ನು ಕೈಗೊಂಡಿದೆ ತಮ್ಮ ಸರ್ಕಾರ ಎಂದು ನಾನು ಕೇಳಬಯಸುತ್ತೇನೆ.

+ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಉಪಾಧ್ಯಕ್ಷರೆ, ಹೊಸ ಸರ್ಕಾರ ಹಾಗೂ ನಮ್ಮ ಮಾನ್ಯ ಕಂದಾಯ ಸಚಿವರು ಬಂದ ಮೇಲೆ ಪ್ರಕೃತಿ ವಿಕೋಪದಿಂದ ಭಾರಿ ಮಳೆಯಾಗಿ ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಹಾನಿ ಉಂಟು ಮಾಡಿದೆ. ಇದರಲ್ಲಿ ವಿಶೇಷವಾಗಿ ಕೆರೆಗಳು ಒಡೆದು ಹೋಗಿರುವಂಥದ್ದು ಹಾಗೂ ಪ್ರಾಣ ಹಾನಿ ಆಗಿರತಕ್ಕಂಥದ್ದುರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಸುಮಾರು 22 ಜನ ಸಾವೀಗಿಡಾಗಿದ್ದಾರೆಂದು ಅನೇಕ ವರದಿಗಳು ಬಂದಿವೆ. ಇದರ ಜೊತೆಗೆ ಬೆಳೆಗೆ ಸಾಕಷ್ಟು ಹಾನಿ ಉಂಟಾಗಿದೆ. ಧಾರವಾಡ, ಚಿಕ್ಕಮಗಳೂರು, ಚಿತ್ರದುರ್ಗ, ಕೋಲಾರ ಜಿಲ್ಲೆಯ ಕೆಲವು ಭಾಗಗಳು ಅದರಲ್ಲೂ ಮಾಲೂರು ತಾಲ್ಲೂಕು, ಬೀದರ್‌ನಲ್ಲಿ ಹೀಗೆ ಅನೇಕ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಸಾಕಷ್ಟು ತೊಂದರೆಯಾಗಿದೆ. ಇಂಥ ಸಂದರ್ಭದಲ್ಲಿ ಹಿಂದೆ ನಮ್ಮ ಸರ್ಕಾರ ಇದ್ದಾಗ ಪ್ರಕೃತಿ ವಿಕೋಪದ ನಿಧಿಯಿಂದ ಸಮಿತಿಯ ಸಭೆಯನ್ನು ಕರೆಯುತ್ತಿದ್ದೆವು. ಮಾನ್ಯ ಹಿರಿಯ ಕಂದಾಯ ಸಚಿವರು ಈ ರೀತಿ ಸಭೆಯನ್ನು ಕರೆಯುತ್ತಾರೆಂದು ನಾನು ಬಹಳ ನಿರೀಕ್ಷೆಯಿಟ್ಟುಕೊಂಡಿದ್ದೆ. ಇವರು ಇದುವರೆವಿಗೂ ಆ ಸಭೆಯನ್ನು ಕರೆಯಲಿಲ್ಲ. ಬಹುಶ: ಅವರಿಗೆ ಜಿಲ್ಲಾಧಿಕಾರಿಗಳಿಂದ ಎಲ್ಲೆಲ್ಲಿ ಹಾನಿಯಾಗಿದೆ ಎಂಬುದರ ಬಗ್ಗೆ ಮಾಹಿತಿ ಇರಬಹುದು. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಇಂಥ ಸಭೆಯನ್ನು ಕರೆದು ಎಷ್ಟು ಹಾನಿಯಾಗಿದೆ ಎಷ್ಟು ಹಣ ಬಿಡುಗಡೆ ಮಾಡಬೇಕು ಎನ್ನುವುದನ್ನು ಅಂಕಿಸಂಖ್ಯೆಗಳಲ್ಲಿ ತೋರಿಸಿಲ್ಲ. ಕೇವಲ ಮೂಗಿಗೆ ತುಪ್ಪ ಹಚ್ಚುವ ರೀತಿಯಲ್ಲಿ ನಿನ್ನೆ ಮೇಲ್ಮನವಿಯಲ್ಲಿ ಇಡೀ ರಾಜ್ಯದಲ್ಲಿ ಎರಡು ಕೋಟಿ ಎಂಭತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಹಣ ಬಿಡುಗಡೆಯಾಗಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಮಿತಿಯ ಸಭೆ ಕರೆದು ಹಣವನ್ನು ಎಲ್ಲೂ ಬಿಡುಗಡೆ ಮಾಡಿಲ್ಲ. ಮಾನ್ಯ ಹೆಚ್. ಕೆ. ಪಾಟೀಲರು ಕಳೆದ ವರ್ಷ ವಿರೋಧ ಪಕ್ಷದ ನಾಯಕರಾಗಿದ್ದಾಗ ಸಾಕಷ್ಟು ಗಲಾಟೆ ಮಾಡಿದ್ದರು, ಅವರು ಕೂಡ ಈ ಸಂದರ್ಭದಲ್ಲಿ ಇಲ್ಲಿಯೇ ಇದ್ದಾರೆ. ಹತ್ತಿ ಬೆಳೆ, ಶೇಂಗ ಬೆಳೆಗಳು ನಾಶವಾಗಿ ಸಾಕಷ್ಟು ಜನ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಪ್ರಕೃತಿ ವಿಕೋಪದ ನಿಧಿಯಿಂದ ಕೇಂದ್ರದಿಂದ 50 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದು ಅದರ ಜೊತೆಯಲ್ಲಿ ನಮ್ಮ ಸರ್ಕಾರ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ನಮ್ಮ ಸೋಮಶೇಖರ್ ರವರು ಕಂದಾಯ ಮಂತ್ರಿಗಳಾಗಿದ್ದಾಗ ಅವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಸುಮಾರು ಒಂದು ನೂರು ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೆವು. ಈಗ ಯಾರಿಗೂ ಹಣ ಸೇರಿಲ್ಲ, ಇದನ್ನು ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು, ಕೇಂದ್ರದಿಂದ ಬರತಕ್ಕಂಥ ಪಾಲು ಏನಿದೆ ಅದನ್ನು ಸಂಪೂರ್ಣವಾಗಿ ನಮಗೆ ಬಂದಿದೆಯೇ ಎನ್ನುವುದರ ಬಗ್ಗೆ ಮಾಹಿತಿ ಕೊಡಬೇಕು. ಎಷ್ಟು ಹಣ ಬಂದಿದೆ, ಎಷ್ಟು

ನಾಶವಾಗಿದೆ ಎಂಬುದರ ಬಗ್ಗೆ ತಾವು ಹೇಳಿಕೆ ಕೊಡಬೇಕು. ನಮ್ಮ ಯುವಕ ಮಿತ್ರರಾದ ಕುಮಾರ್ ಬಂಗಾರಪ್ಪನವರು ಇಲ್ಲಿಯೇ ಇದ್ದಾರೆ. ಇವರು ಸಣ್ಣ ನೀರಾವರಿ ಸಚಿವರಾಗಿದ್ದಾರೆ. ಇವತ್ತು ಸಾಕಷ್ಟು ಕೆರೆಗಳು ಒಡೆದು ಹೋಗಿವೆ. ಮಾನ್ಯ ಹನುಮೇಗೌಡರು ಹೇಳಿದ ಹಾಗೆ ಹಾಸನದಲ್ಲಿ ಸಾಕಷ್ಟು ಕೆರೆಗಳು ಒಡೆದು ಹೋಗಿವೆ. ಈ ಮಾಹಿತಿಯನ್ನು ತರಿಸಿಕೊಂಡು ತುರ್ತುಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ತಕ್ಷಣವೇ ತಾವು ಏನು ಮಾಡಿದಿರಿ? ರಾಜ್ಯದಲ್ಲಿ ಸುಮಾರು 35 ಸಾವಿರ ಕೆರೆಗಳಿವೆ. ಇಷ್ಟು ಕೆರೆಗಳಲ್ಲಿ ಒಡೆದು ಹೋಗಿರುವ ಕೆರೆಗಳ ಬಗ್ಗೆ ದುರಸ್ತಿ ಮತ್ತು ಪರಿಹಾರ ಕಾರ್ಯಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ದನ-ಕರುಗಳು, ಮನುಷ್ಯರು ಎಷ್ಟು ಸಾವಿಗೀಡಾಗಿದ್ದಾರೆ? ಈ ದೃಷ್ಟಿಯಿಂದ ತುರ್ತು ಕ್ರಮ ಕೈಗೊಂಡು ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ ಭೈರೇಗೌಡರು ತಿಳಿಸಿದ ಹಾಗೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯಬೇಕಾಗುತ್ತದೆ. ಇವತ್ತು ಪಶ್ಚಿಮ ಬಂಗಾಳ ಮತ್ತು ಒರಿಸ್ಸಾದಲ್ಲಿ ದುರಾದೃಷ್ಟದಿಂದ ಚಂಡಮಾರುತ ಎದ್ದಿದೆ. ಸಾವಿರಾರು ಜನಗಳ ಪ್ರಾಣ ಹಾನಿ, ಕಣ್ಮರೆ, ರಸ್ತೆ ಹಾನಿಯಾಗಿರುವ ವಿಚಾರವನ್ನು ಇವತ್ತು ಪತ್ರಿಕೆಗಳಲ್ಲಿ ನೋಡಿದ್ದೇವೆ. ಇದರಂತೆ ರಸ್ತೆಗಳು, ಕೆರೆ ಕಟ್ಟೆಗಳು, ಸೇತುವೆಗಳು ಈ ಅತಿವೃಷ್ಟಿಯಿಂದ ಹಾನಿಯಾಗಿವೆ. ಧಾರವಾಡ, ಹಾವೇರಿ, ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಹಾನಿ ಉಂಟಾಗಿದೆ. ಹಾಳಾಗಿರುವ ಎಲ್ಲಾ ರಸ್ತೆಗಳ ದುರಸ್ತಿ ಕಾರ್ಯವನ್ನು ತಾವು ಕೈಗೆತ್ತಿಕೊಳ್ಳಬೇಕು. ಏಕೆಂದರೆ, ತಾವೇ ರಸ್ತೆಗಳನ್ನು ಸರಿಪಡಿಸುತ್ತೇವೆಂದು ಹೇಳಿದ್ದೀರಿ. ಇದರಲ್ಲಾದರೂ 27 ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಹೆಚ್ಚು ಹಾನಿಯಾಗಿರುವ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ತೊಡಗಿಸಿ ಪರಿಹಾರ ಕ್ರಮವನ್ನು ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆಯನ್ನು ತುರ್ತಾಗಿ ಮಾಡಿ, ಮುಂದಿನ ವಾರದಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಡೀ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ಚರ್ಚಿಸಬೇಕು. ಏಕೆಂದರೆ ಇದು ಪ್ರತಿ ವರ್ಷ ಮುಂದಕ್ಕೆ ಹಾಕಿಕೊಂಡು ಅತಿವೃಷ್ಟಿ ಸಮಯದಲ್ಲಿ ಸಮಯವನ್ನು ಕಳೆದು ಮುಗಿದು ಹೋದ ಮೇಲೆ ಆಯಿತು ಹೋಗಿ ಎಂದು ಹೇಳುವ ಪ್ರವೃತ್ತಿ ಬೆಳೆದು ಬಂದಿದೆ. ಸಾಮಾನ್ಯವಾಗಿ ನಾವು ಇಂಥ ದೃಶ್ಯವನ್ನು ಕಾಣುತ್ತಿದ್ದೇವೆ. ಇದಕ್ಕೆ ಸಾಕಷ್ಟು ನಿಯಮಗಳನ್ನು ಹೇಳುತ್ತಾರೆ ಇದೀಗ ತಾನೆ ಹೊಸದಾಗಿ ಶಾಸಕರು ಬಂದಿದ್ದಾರೆ, ನಿನ್ನೆ ತಾನೇ ತಾವು ಶಾಸಕರ ಸಭೆ ಮಾಡಿದಿರಿ ಆದರೆ ಅಲ್ಲಿ ಯಾರು ಇದರ ಬಗ್ಗೆ ಪ್ರಸ್ತಾಪಿಸಲಿಲ್ಲ. ಅಲ್ಲಿ ಏನು ಪ್ರಸ್ತಾಪವಾಗಿದೆ ಎಂದರೆ ನಾಮಕರಣ ವಿಷಯ ಮತ್ತಿತರ ವಿಷಯ ಮಾತ್ರ ಪ್ರಸ್ತಾಪವಾಗಿದೆ. ಆದರೆ ಪ್ರತಿಯೊಬ್ಬ ಶಾಸಕರು ಅವರವರ ತಾಲ್ಲೂಕುಗಳಲ್ಲಿ ಆಗಿರತಕ್ಕಂಥ ಹಾನಿಯನ್ನು ನೋಡಿಕೊಂಡು ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಹಾಗೂ ಕಂದಾಯ ಸಚಿವರ ಮೇಲೆ ಒತ್ತಡ ತಂದು ಹೆಚ್ಚು ಹಣ ಬಿಡುಗಡೆ ಮಾಡಿಸುವಂಥ ಕೆಲಸ ಮಾಡಬೇಕು. ಈ ಕಾರ್ಯ ಸಮರೋಪಾಧಿಯಲ್ಲಿ ಆಗಬೇಕಾಗಿದೆ. ಇದರಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನುವುದನ್ನು ತಿಳಿಸಿ, ಮಾನ್ಯ ಕಂದಾಯ ಸಚಿವರು ಕೊಟ್ಟಿರತಕ್ಕಂಥ ಹಣ ಯಾವುದಕ್ಕೂ ಸಾಲುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ಗ್ರಾಮಾಂತರಗಳಿಂದ ಹಾಗೂ ಜಿಲ್ಲೆಗಳಿಂದ ಎಷ್ಟು ಬೇಡಿಕೆ ಬಂದಿದೆ ಎನ್ನತಕ್ಕಂಥ ವಿಚಾರಗಳ ಅಂಕಿಅಂಶಗಳನ್ನು ಕೂಡ ತಾವು ಕೊಡಬೇಕಾಗುತ್ತದೆ. ಗ್ರಾಮಾಂತರ ಜಿಲ್ಲೆಗಳಿಂದ ಕುಡಿಯುವ ನೀರಿಗೆ ಎಷ್ಟು ಬೇಡಿಕೆ ಇದೆ, ರಸ್ತೆಗಳಿಗೆ ಎಷ್ಟು ಬೇಡಿಕೆ ಇದೆ, ಎಷ್ಟು ಕೆರೆ-ಕಟ್ಟೆಗಳು ಒಡೆದು ಹೋಗಿವೆ, ಎಷ್ಟು ಪ್ರಾಣಹಾನಿಯಾಗಿದೆ, ಅರ್ಬನ್ ಡಿಸ್ಟ್ರಿಕ್ಟನಲ್ಲಿ ಏನಾಗಿದೆ, ಬೇರೆ ಬೇರೆ ಜಿಲ್ಲೆಗಳಿಂದ ತಂದಿರತಕ್ಕಂಥ ಜಿಲ್ಲಾಧಿಕಾರಿಗಳ ಮಾಹಿತಿ ಏನು, ಎಂಬಿತ್ಯಾದಿ ಎಲ್ಲಾ ಮಾಹಿತಿಗಳನ್ನು

ತಾವು ದಯಮಾಡಿ ಕೊಡಬೇಕಾಗುತ್ತದೆ. ಇಲ್ಲಿರುವ ಸಮಿತಿಯ ಸಭೆ ಕರೆದು ಮುಖ್ಯ ಕಾರ್ಯದರ್ಶಿಗಳವರ ಜೊತೆಯಲ್ಲಿ ಮಾತನಾಡಿ ಮುಖ್ಯಮಂತ್ರಿಗಳು ಸಮಿತಿಯ ಸಭೆಯನ್ನು ಕರೆದು ಅಲ್ಲಿಂದ ಹಣವನ್ನು ಕೂಡಲೇ ಬಿಡುಗಡೆ ಮಾಡಿ, ಶಾಸಕರ ಸಭೆಗಳನ್ನು ಕರೆದು ಈ ಕೆಲಸ ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕು ಎಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪಿ. ಜಿ. ಆರ್. ಸಿಂಧ್ಯಾರವರು ಮತ್ತು ಇನ್ನಿತರ ಸದಸ್ಯರು ಕೂಡಿಕೊಂಡು ಏನು ಈ ನಿಲುವಳಿ ಸೂಚನೆ ತಂದಿದ್ದಾರೆ ಇದು ಬಹಳ ಮಹತ್ವದ ವಿಚಾರ. ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಸಂದರ್ಭದಲ್ಲಿ ಈ ವಿಚಾರವಾಗಿ ನಾನು ಪ್ರಸ್ತಾಪಿಸಿದ್ದೆ. ಇನ್ನೂ ಆ ವಿಚಾರವಾಗಿ ಸಾಕಷ್ಟು ವಿಷಯಗಳನ್ನು ಹೇಳಬೇಕಾಗಿತ್ತು. ಇವತ್ತು ರಾಜ್ಯದಲ್ಲಿ ಸುಮಾರು 10-15 ಜಿಲ್ಲೆಗಳಲ್ಲಿ ಮಳೆಯಿಂದ ಮತ್ತು ಅನಾವೃಷ್ಟಿಯಿಂದ ಬಹಳ ಹಾನಿಯಾಗಿದೆ. ಅದರಲ್ಲೂ ಅತಿವೃಷ್ಟಿಯಿಂದ ಹಲವಾರು ಹಳ್ಳಗಳು ಹರಿದು ಬೆಳೆ ನಾಶವಾಗಿದೆ. ಇದರಿಂದಾಗಿ ರೈತರ ಗುಡಿಸಲುಗಳು ಮತ್ತು ಮನೆಗಳು ಹಾನಿಗೀಡಾಗಿವೆ. ಇದರ ಜೊತೆಗೆ ಅನೇಕ ದನಕರುಗಳು ನಾಪತ್ತೆಯಾಗಿವೆ, ಕೆಲವು ಜೀವ ಹಾನಿ ಕೂಡ ಆಗಿವೆ. ಈ ರೀತಿ-ಯಾಗಿ ಹಾನಿಯಾಗಿರುವ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ವರದಿಗಳು ಬರುವುದನ್ನು ನಾನು ಕೂಡ ನೋಡಿದ್ದೇನೆ. ನಾನೇ ಕೆಲವು ತಾಲ್ಲೂಕುಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿದ್ದೇನೆ. ಇವತ್ತು ಎಂಥ ಪರಿಸ್ಥಿತಿ ಇದೆ ಎಂದರೆ, ಅನಾವೃಷ್ಟಿ ಅಥವಾ ಅತಿವೃಷ್ಟಿ ಸಂಭವಿಸಿ ಹಾನೀಗಿಡಾದಾಗ ತಕ್ಷಣಕ್ಕೆ ಸರ್ಕಾರದಿಂದ ಪರಿಹಾರ ಕಾರ್ಯಕ್ರಮಗಳು ನಡೆಯುವುದಿಲ್ಲ. ಸ್ಥಳದಲ್ಲಿರುವ ಕೆಳ ಹಂತದ ಅಧಿಕಾರಿಗಳು ಹಾನಿಗೀಡಾದಾಗ ಸ್ಥಳಕ್ಕೆ ಹೋಗಿ ನೊಂದವರಿಗೆ ಸಾಂತ್ವನ ಹೇಳುವುದಾಗಲಿ, ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಾಗಲಿ ಸರ್ವೆ ಮಾಡುವುದಾಗಲಿ ಇಂಥ ಯಾವ ಕೆಲಸವೂ ನಡೆಯುವುದಿಲ್ಲ. ಆ ವಿಷಯದ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆಯಾಗಿ, ಸರ್ಕಾರದಿಂದ ಉನ್ನತ ಮಟ್ಟದ ಅಧಿಕಾರಿಗಳ ಒತ್ತಡ ತಂದಾಗ ಅಲ್ಲಿ ಪರಿಹಾರದ ಕೆಲಸಗಳು ಪ್ರಾರಂಭವಾಗುತ್ತವೆ. ಆದ್ದರಿಂದ, ಸರ್ಕಾರ ಈ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕಾಗುತ್ತದೆ ಇದಕ್ಕೊಂದು ಉದಾಹರಣೆ ಕೊಡುವುದಾದರೆ, ತಮ್ಮ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ಸಾಕಷ್ಟು ಹಾನಿಯಾಗಿದೆ. ಅಲ್ಲಿರತಕ್ಕಂಥ ಬೆಣ್ಣೆಹಳ್ಳ ನದಿ ತುಂಬಿ ತುಳುಕಿ ಹರಿದು ನೀರು ಬೇರೆ ಬೇರೆ ತಾಲ್ಲೂಕಿನ ಪ್ರದೇಶಗಳಲ್ಲಿರುವ ಡ್ಯಾಂಗಳಿಗೆ ಹೋಗಿ ಅಲ್ಲಿರತಕ್ಕಂಥ ಬೆಳೆ ಹಾಗೂ ಗುಡಿಸಲುಗಳು ನಾಶವಾಗಿರುವುದು ಕಂಡು ಬರುತ್ತಿದೆ. ಇದಕ್ಕೊಂದು ನಿಜವಾದ ಪರಿಹಾರವನ್ನು ನಾವಿಂದು ಹುಡುಕಬೇಕಾಗಿದೆ. ನವಿಲುಗುಂದದ ಹತ್ತಿರದಲ್ಲಿರುವ ಈ ಬೆಣ್ಣೆಹಳ್ಳಕ್ಕೆ ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಬ್ರಿಡ್ಜ್‌ಕಟ್ಟಲು ಹಣ ಮಂಜೂರು ಆಗಿರುವುದು ಇದೆ. ಇದು ಯಾವ ಹಂತದಲ್ಲಿದೆ? ಮಾನ್ಯ ಹೆಚ್. ಕೆ. ಪಾಟೀಲ್‌ರವರು ಮೊನ್ನೆ ಹುಬ್ಬಳ್ಳಿಗೆ ಬಂದಂಥ ಸಂದರ್ಭದಲ್ಲಿ ಈ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾಗುತ್ತದೆ ಏಕೆಂದರೆ, ಪ್ರತಿ ವರ್ಷ ಈ ರೀತಿ ಅನಾಹುತ ಸಂಭವಿಸುತ್ತದೆ. ಕಳೆದ ಎರಡು ವರ್ಷಗಳ ಹಿಂದೆ ಇದೆ ಬೆಣ್ಣೆಹಳ್ಳ ತುಂಬಿ ಹೆಚ್ಚಾದ ನೀರು ಹರಿದು ಅನೇಕ ಗ್ರಾಮಗಳು

ಮುಳುಗಿ ಹೋಗಿರುವ ಸಂದರ್ಭವೂ ಉಂಟು. ಆದ್ದರಿಂದ, ಎಲ್ಲೆಲ್ಲಿ ಇಂಥ ಬ್ರಿಡ್ಜ್ ಕಟ್ಟುವ ಕೆಲಸ ಇದೆ, ಅಥವಾ ನೀರನ್ನು ಬೇರೆ ಕಡೆಗೆ ಡೈವರ್ಟ್ ಮಾಡುವುದು ಇದೆ, ಇಂಥವುಗಳಿಗೆ ತಕ್ಷಣ ಪರಿಹಾರ ಕ್ರಮ ಕೈಗೊಳ್ಳುವುದು ಸರ್ಕಾರದ ಕಡೆಯಿಂದ ತುರ್ತಾಗಿ ಆಗಬೇಕಾಗಿದೆ. ಇಡೀ ರಾಜ್ಯದಲ್ಲಿ ಪರಿಹಾರ ರೂಪವಾಗಿ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ ಎಂದು ತಾವು ಹೇಳುತ್ತೀರಿ, ಆದ್ದರಿಂದ ಬೇರೆ ಬೇರೆ ಜಿಲ್ಲೆಗಳಿಂದ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ಯಾವ ರೀತಿ ವರದಿಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ, ಧಾರವಾಡ ಜಿಲ್ಲೆಯೊಂದರಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಳಷ್ಟು ಹಾನಿ ಉಂಟಾಗಿರುವ ಬಗ್ಗೆ ವರದಿ ಬಂದಿದೆ, ಈ ವಿಷಯ ಪತ್ರಿಕೆಯಲ್ಲಿ ಕೂಡ ಬಂದಿದೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಿಂದ ಯಾವ ರೀತಿ ವರದಿ ಬಂದಿದೆ, ಅಲ್ಲಿನ ಜಿಲ್ಲಾಧಿಕಾರಿಗಳು ಯಾವ ರೀತಿ ಸರ್ವೆ ಮಾಡಿದ್ದಾರೆ, ಪರಿಹಾರವಾಗಿ ಎಷ್ಟು ರೈತರಿಗೆ ತಕ್ಷಣಕ್ಕೆ ಕೊಟ್ಟಿದ್ದಾರೆ, ಎನ್ನುವುದರ ಬಗ್ಗೆ ಕೂಲಂಕುಷವಾಗಿ ವರದಿಗಳನ್ನು ಈ ಸರ್ಕಾರ ಸದನದ ಮುಂದೆ ಇಟ್ಟು, ಇದಕ್ಕೆ ತಕ್ಷಣ ಏನು ಕ್ರಮ ಕೈಗೊಂಡಿದೆ, ಮುಂದೆ ಯಾವ ರೀತಿ ಕ್ರಮ ಕೈಗೊಳ್ಳುತ್ತಿದೆ, ಎಂಬುದರ ಬಗ್ಗೆ ಹಾಗೂ ಪರಿಹಾರ ಕೊಡುವ ನಿಟ್ಟಿನಲ್ಲಿ ಸಮರೋಪಾಧಿಯಲ್ಲಿ ಕೆಲಸ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ನಿಲುವಳಿ ಸೂಚನೆಯನ್ನು ತಂದಿರತಕ್ಕಂಥ ಮಾನ್ಯ ಸಿಂಧ್ಯಾರವರಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ಈ ವಿಷಯವನ್ನು ಸರ್ಕಾರದವರು ಬಹಳ ಗಂಭೀರವಾಗಿ ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಈ ವಿಷಯದ ಬಗ್ಗೆ ಇನ್ನೂ ಹೆಚ್ಚಿಗೆ ಹೇಳಬೇಕಾಗಿರುವುದರಿಂದ ಮುಂದೆ ನಾವು 11ಕ್ಕೆ ಏನು ಸಭೆ ಸೇರುತ್ತೇವೆ ಆ ದಿನ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖೇನ ಸರ್ಕಾರದ ಮೇಲೆ ಒತ್ತಡ ತಂದು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೆ, ಅತಿವೃಷ್ಟಿ ಮತ್ತು ಅನಾವೃಷ್ಟಿ ಪ್ರತಿ ವರ್ಷ ಎಲ್ಲಾ ರಾಜ್ಯಗಳಲ್ಲಿಯೂ ಬರುತ್ತದೆ. ಇದು ಅಧಿಕ ಮಳೆಯ ಸೀಜನ್‌ನಿಂದ ಬರುತ್ತದೆ ಮತ್ತೆ ಮಳೆ ಇಲ್ಲದೇ ಬರ ಪರಿಸ್ಥಿತಿ ಬರುತ್ತದೆ. ಸರ್ಕಾರ ಈ ಒಂದು ಸಮಸ್ಯೆಯನ್ನು ಯಾವ ರೀತಿ ನೋಡಬೇಕೆಂದರೆ, ಇದನ್ನು ಬೇರೆ ಸಾಮಾನ್ಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ರೀತಿಯಲ್ಲಿ ನೋಡತಕ್ಕಂಥದ್ದಲ್ಲ. ಇದಕ್ಕೆ ಸಮರೋಪಾದಿಯಲ್ಲಿ ತತ್‌ಕ್ಷಣ ಸರ್ಕಾರ ತನ್ನ ಕಾರ್ಯಕ್ರಮಗಳನ್ನು ಹಾಕಿಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಇವತ್ತು ಸುಮಾರು ಒಂದು ತಿಂಗಳಿಂದೀಚೆಗೆ ನಮ್ಮ ರಾಜ್ಯ ಅನೇಕ ಜಿಲ್ಲೆಗಳಲ್ಲಿ ಅಧಿಕ ಮಳೆಯಿಂದ ಕೆರೆಕಟ್ಟೆಗಳು ಒಡೆದು ಹೋಗಿವೆ. ಇದರಿಂದ ಖಾಸಗಿ ಆಸ್ತಿಪಾಸ್ತಿಗಳು ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳು ತುಂಬಾ ನಷ್ಟವಾಗಿರತಕ್ಕಂಥದ್ದನ್ನು ಪ್ರತಿದಿನ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ ಮತ್ತು ಅಧಿಕಾರಿಗಳ ವರದಿಯಿಂದಲೂ ಸಹ ನೋಡಿದ್ದೇವೆ. ಈ ಒಂದು ಸರ್ಕಾರ ಹೊಸದಾಗಿ ಬಂದಿದೆ. ಈ ಸರ್ಕಾರ ಹೊಸದಾಗಿ ಸಚಿವ ಸಂಪುಟ ರಚನೆ ಮಾಡುವುದರಲ್ಲಿ ಮತ್ತು ಖಾತೆಗಳನ್ನು ಹಂಚತಕ್ಕ ಕಾರ್ಯದಲ್ಲಿ ಸ್ವಲ್ಪ ತಲ್ಲೀನರಾಗಿದ್ದಾರೆ. ಇದರ ಬಗ್ಗೆ ತಾವು ಗಮನ ಹರಿಸಿಲ್ಲವೆಂದು ನಮಗೆ ಬಹಳ ನೋವಾಗಿದೆ. ಅದು ಆಗಬಾರದು. ಕೆಲವು ಜಿಲ್ಲೆಗಳಲ್ಲಿ ಅಧಿಕ ಮಳೆಯಾಗಿದೆ. ಇವತ್ತು

ಮಂಡ್ಯ ಜಿಲ್ಲೆಯನ್ನೆ ತೆಗೆದುಕೊಂಡರೆ ಸುಮಾರು ಎರಡು ಮೂರು ತಾಲ್ಲೂಕುಗಳಾದ ಕೆ. ಆರ್. ಪೇಟೆ ಮತ್ತು ನಾಗಮಂಗಲ ಹಾಗೂ ಮಳವಳ್ಳಿಯಲ್ಲಿ ಜಾಸ್ತಿ ಮಳೆಯಾಗಿರುವುದರಿಂದ ಸುಮಾರು ಎರಡು- ಮೂರು ಜನ ಸತ್ತಿದ್ದಾರೆ. ಸುಮಾರು 800 ರಿಂದ 900 ಮನೆಗಳು ಕುಸಿದು ಬಿದ್ದಿವೆ ಎಂದು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಹಾಗೆಯೇ ಸುಮಾರು ಕೆರೆಕಟ್ಟೆಗಳು ಒಡೆದು ಹೋಗಿರುವುದರಿಂದ ಐದಾರು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎನ್ನತಕ್ಕಂಥದ್ದನ್ನು ಸಹ ನೋಡಿದ್ದೇವೆ. ಸಾರ್ವಜನಿಕ ಆಸ್ತಿಪಾಸ್ತಿಗಳಲ್ಲದೇ ಖಾಸಗಿ ಆಸ್ತಿಪಾಸ್ತಿಗಳು ಸುಮಾರು 10 ರಿಂದ 12 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಆಗಿರತಕ್ಕಂಥ ನಷ್ಟಕ್ಕೆ ಇನ್ನೂ ಒಂದೂ ಪೈಸೆಯನ್ನು ಬಿಡುಗಡೆ ಮಾಡಿಲ್ಲವೆಂದು ನನಗನ್ನಿಸುತ್ತದೆ. ಇಡೀ ರಾಜ್ಯಕ್ಕೆ ಸುಮಾರು ಎರಡು ಕೋಟಿ ಚಿಲ್ಲರೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ಈ ಹಣ ಒಂದು ಜಿಲ್ಲೆಗೂ ಸಹ ಸಾಕಾಗುವುದಿಲ್ಲ. ನಾನು ಈ ಇಲಾಖೆಯಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಎಷ್ಟು ನಷ್ಟವಾಗಿದೆ ಅಷ್ಟನ್ನೂ ಸಹ ಪೂರೈಸುವುದಕ್ಕೆ ಯಾವ ಸರ್ಕಾರದಿಂದ ಸಾಧ್ಯವಾಗುವುದಿಲ್ಲ. ಆದರೆ ತತ್‌ಕ್ಷಣ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂದರೆ, ಸತ್ತಿರತಕ್ಕಂಥವರಿಗೆ ಪರಿಹಾರ ಕೊಡತಕ್ಕಂಥದ್ದು ಮತ್ತು ಮನೆ ಬಿದ್ದು ಹೋಗಿರುವಂಥವರಿಗೆ ಪರಿಹಾರಕ್ಕಾಗಿ ತಕ್ಷಣ ಹಣ ಬಿಡುಗಡೆ ಮಾಡಿ ಸಹಾಯ ಮಾಡತಕ್ಕಂಥದ್ದು ಮತ್ತು ಒಡೆದು ಹೋಗಿರತಕ್ಕಂಥ ಕಟ್ಟೆಗಳನ್ನು ತಕ್ಷಣ ನಿರ್ಮಿಸತಕ್ಕಂಥದ್ದು ಹಾಗೂ ರಸ್ತೆ ರಿಪೇರಿ ಮಾಡತಕ್ಕಂಥ ಕೆಲಸವನ್ನು ತಕ್ಷಣ ತೆಗೆದುಕೊಳ್ಳತಕ್ಕಂಥದ್ದು ಸರ್ಕಾರದ ಮೇಲೆ ಇದೆ. ಇವತ್ತು ಮಳೆಯಿಂದ ಹಾನಿಯಾಗಿರತಕ್ಕಂಥ ಪ್ರದೇಶಕ್ಕೆ ಮಂತ್ರಿಗಳಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ ಭೇಟಿ ಕೊಟ್ಟಿರತಕ್ಕಂಥ ಒಂದು ಸಂದರ್ಭ ಇನ್ನೂ ಆಗಿಲ್ಲವೆಂದು ನನಗನ್ನಿಸುತ್ತದೆ. ಇವತ್ತು ಮಂಡ್ಯ ಜಿಲ್ಲೆಯಲ್ಲಿ ಇಷ್ಟೊಂದು ನಷ್ಟವಾಗಿದ್ದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಭೇಟಿ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ ಅವರಿಗೆ ಈ ಸಾರಿ ಸಂಪೂರ್ಣವಾದಂಥ ಬೆಂಬಲವನ್ನು ಜನ ಕೊಟ್ಟಿದ್ದಾರೆ. ಇವರಿಗೆ ಹೆಲಿಕ್ಯಾಪ್ಟರ್ ಇದ್ದರೂ ಸಹ ಬಂದಿಲ್ಲ ಹಾಗೆಯೆ ಕಂದಾಯ ಮಂತ್ರಿಗಳು ಸಹ ಮಂಡ್ಯ ಜಿಲ್ಲೆಯ ಪಕ್ಕದ ಜಿಲ್ಲೆಯವರಾಗಿದ್ದರೂ ಇಲ್ಲಿಗೆ ಭೇಟಿ ನೀಡಿಲ್ಲ.

ಶ್ರೀ ಎಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ನಾಳೆ ಮಂಡ್ಯ ಜಿಲ್ಲೆಗೆ ಭೇಟಿ ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : "ಕೊಳ್ಳೆ ಹೊಡೆದುಕೊಂಡು ಹೋದ ಮೇಲೆ ಕೋಟೆ ಬಾಗಿಲು ಹಾಕಿಕೊಂಡರೆ" ಏನು ಪ್ರಯೋಜನ? ನನಗೆ ಸಂಬಂಧಪಟ್ಟ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ, ತಾವು ತಪ್ಪು ತಿಳಿದುಕೊಳ್ಳಬಾರದು. ಇದನ್ನು ಮಾನ್ಯ ಚಂದ್ರೇಗೌಡರು ಕೇಳಿರಬಹುದು. ಎರಡು ವರ್ಷಗಳ ಹಿಂದೆ ಏಪ್ರಿಲ್ ತಿಂಗಳಿನಲ್ಲಿ ನಾನು ಮತ್ತು ಮಾನ್ಯ ಮಂಜುನಾಥ್‌ರವರು ಸುಮಾರು 9.30 ಯಿಂದ 10.00ಗಂಟೆ ಒಳಗೆ ಪ್ರಮಾಣವಚನ ಸ್ವೀಕಾರ ಮಾಡಿ 10.00 ಗಂಟೆಗೆ ರೆವಿನ್ಯೂ ಕಮಿಷನರ್‌ರವರನ್ನು ಕರೆಸಿ 12.00 ಗಂಟೆಗೆ ವಿಮಾನದ ಮೂಲಕ ಬೀದರ್‌ಗೆ ಭೇಟಿ ಕೊಟ್ಟೆ, ಇಲ್ಲಿ ನಾನು ಸಚಿವನಾದ ವಿಷಯವನ್ನು ಕೇಳಿ ಎಲ್ಲರೂ ಹೂವಿನ ಹಾರವನ್ನು ಹಿಡಿದುಕೊಂಡು ಬಂದು ಅಭಿನಂದನೆ ಸಲ್ಲಿಸಲು ಬಂದರು, ಆ ಸಂದರ್ಭದಲ್ಲಿ

ನಾನು ಬೀದರ್‌ನಲ್ಲಿದ್ದೆ. ಇದನ್ನು ನಾನು ಮೆಚ್ಚುಗೆಯಿಂದ ಹೇಳತಕ್ಕಂಥ ವಿಷಯವಲ್ಲ. ಇದೊಂದು ಜವಾಬ್ದಾರಿ. ನಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡತಕ್ಕಂಥದ್ದು ಪ್ರತಿಯೊಬ್ಬ ಮಂತ್ರಿಗಳಾಗಲಿ ಅಥವಾ ಯಾರಿಗೇ ಆಗಲಿ ಜವಾಬ್ದಾರಿ ಇರಬೇಕಾಗುತ್ತದೆ. ನಾನು ಬೀದರ್‌ಗೆ ಭೇಟಿ ನೀಡಿ ಬಂದ ಮೇಲೆ ಮಾನ್ಯ ಹೆಚ್. ಕೆ. ಪಾಟೀಲ್‌ರವರು ಅಲ್ಲಿಗೆ ಬಂದಿದ್ದರು. ಅಂದು ಭಾನುವಾರ ಆಗಿದ್ದರೂ ಸಹ ಬೆಳಿಗ್ಗೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ಯಾರ್ಯಾರಿಗೆ ನಷ್ಟವಾಗಿ, ಏನೇನು ಪ್ರಹಾರಿ ಕೊಡಬೇಕೆಂಬುದರ ಬಗ್ಗೆ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ಹಣ ಬಿಡುಗಡೆ ಮಾಡಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಯವರಾಗಿರುವುದರಿಂದ, ಮಂಡ್ಯ ಜಿಲ್ಲೆಯಲ್ಲಿ ಮಳೆಯಿಂದ ಆಗಿರತಕ್ಕಂಥ ಅನಾಹುತವನ್ನು ನೋಡುವುದಕ್ಕೆ ಹೋಗುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ, ಆದರೆ ಅವರು ಹೋಗಿಲ್ಲ ಹಾಗೆಯೆ ಪಕ್ಕದ ಜಿಲ್ಲೆಯವರಾದ ಮಾನ್ಯ ಕಂದಾಯ ಮಂತ್ರಿಗಳೂ ಸಹ ಹೋಗಿಲ್ಲ. ಎಲ್ಲಾ ಮಂತ್ರಿಗಳು ತಮ್ಮ ತಮ್ಮ ಖಾತೆಗಳ ಹಂಚಿಕೊಳ್ಳುವ ಕಾರ್ಯದಲ್ಲಿಯೆ ಕಾಲ ಕಳೆದರೆ ಹೊರತು ಹೆಚ್ಚಿಗೆ ಮಳೆಯಿಂದ ಆಗಿರತಕ್ಕಂಥ ಹಾನಿಯನ್ನು ನೋಡುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ.

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಹೋಗಿಲ್ಲವೆಂದು ರೆಫರೆನ್ಸ್ ಮಾಡಿರುವುದಕ್ಕೋಸ್ಕರ ಈ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರಿಗೂ ಗೊತ್ತಿದೆ. ನಾವು ಪ್ರಮಾಣ ರಚನ ಸ್ವೀಕಾರ ಮಾಡಿ ಇನ್ನು 24 ಗಂಟೆ ಆಗಿರಲಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯಲ್ಲಿರುವ ಬೆಣ್ಣೆಹಳ್ಳ ಪ್ರವಾಹದಿಂದ ಆಗಿರತಕ್ಕಂಥ ಹಾನಿಯ ಬಗ್ಗೆ ವೀಕ್ಷಿಸಲು ತಾವು ಧಾವಿಸಿ ಏನೇನು ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ತಾವು ತಕ್ಷಣ ಪ್ರವಾಸ ಕೈಗೊಳ್ಳಬೇಕೆಂದು ಹೇಳಿದರು. ನಂತರ ಪ್ರವಾಹದ ವಿಚಾರಗಳಿಗೆ ಸಂಬಂಧಪಟ್ಟ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಸ್ಥಳಕ್ಕೆ ಹೋಗದೆ ಧಾರವಾಡ ಜಿಲ್ಲೆಯಲ್ಲಿ ಆಗಿರತಕ್ಕಂಥ ಪ್ರವಾಹದ ವಿಚಾರವನ್ನು ವಿಡಿಯೋ ಕಾನ್‌ಫೆರೆನ್ಸಿಂಗ್ ಮುಖಾಂತರ ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡತಕ್ಕಂಥ ಕಾರ್ಯ ನಡೆದಿದೆ. ಇಷ್ಟೊಂದು ತೀವ್ರವಾಗಿ ಸ್ಪಂದಿಸಿ ಕಾರ್ಯ ನಡೆಸಿದ್ದರೂ ನೀವು ಈ ರೀತಿ ಹೇಳಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಕಂಪ್ಯೂಟರ್ ಅಥವಾ ಫ್ಯಾಕ್ಸ್ ಮೂಲಕ ಮಾಹಿತಿಯನ್ನು ತರಿಸಿಕೊಂಡಿರಬಹುದು. 8 ದಿವಸಗಳಲ್ಲಿ ತರಿಸಿಕೊಳ್ಳುವುದನ್ನು 8 ನಿಮಿಷದಲ್ಲಿ ಪಡೆದುಕೊಳ್ಳಬಹುದು, ಅದು ಬೇರೆ ಪ್ರಶ್ನೆ. ಒಬ್ಬ ಮಂತ್ರಿ ತಾನೇ ಖುದ್ದಾಗಿ ಸ್ಥಳವನ್ನು ಭೇಟಿ ಮಾಡತಕ್ಕಂಥದ್ದಕ್ಕೂ, ಮಾಹಿತಿ ತರಿಸಿಕೊಂಡು ಕೆಲಸ ಮಾಡುವುದಕ್ಕೂ ಬಹಳ ವ್ಯತ್ಯಾಸ ಇದೆ. ಇದರ ಜೊತೆಗೆ ಕೇಂದ್ರದ ಎನ್.ಪಿ.ಸಿ.ಆರ್.ರವರು ಪ್ರತಿ ವರ್ಷ ನಮ್ಮ ರಾಜ್ಯಕ್ಕೆ ಪರಿಹಾರ ಹಣವನ್ನು ಕೊಡುತ್ತಾರೆ. ಅದರಂತೆ ಹೋದವರ್ಷ ಸುಮಾರು 46 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈ ವರ್ಷ 48 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರು ಪ್ರತಿ ವರ್ಷ ಅಲೋಕೇಶನ್ ಮಾಡುತ್ತಿರುತ್ತಾರೆ. ಇಷ್ಟು ಅಲ್ಲದೇ ನಾವು ಪ್ರತ್ಯೇಕವಾದ ಮನವಿಯನ್ನು ಸಲ್ಲಿಸಿ ಕೆಲವು ಮೆಮೊರ್ಯಾಂಡಂಗಳನ್ನು ಸಹ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದ ದೃಷ್ಟಿಕೋನ

ಯಾವ ರೀತಿ ಇದೆ ಎಂದರೆ, ಯಾರು ಸಹ ಅಳತೆ ಮಾಡದೇ ಹಾಲು ಕೊಡುವುದಿಲ್ಲ. ನಾವು ಸುಮಾರು 500 ಕೋಟಿ ರೂಪಾಯಿಗಳ ಮನವಿಯನ್ನು ಸಲ್ಲಿಸಿದರೆ ಅವರು 5 ಕೋಟಿ ರೂಪಾಯಿಗಳನ್ನು ಕೊಡುವುದೇ ಕಷ್ಟ. ಹೋದವರ್ಷ ನಮಗೆ 46 ಕೋಟಿ ರೂಪಾಯಿಗಳಷ್ಟು ಮಾತ್ರ ಒಂದು ವರ್ಷಕ್ಕೆ ಅಲೋಕೇಶನ್ ಇತ್ತು. ಆ 46 ಕೋಟಿ ರೂಪಾಯಿಗಳಲ್ಲದೇ ಸುಮಾರು 120 ರೂಪಾಯಿಗಳಷ್ಟು ಹಣವನ್ನು ಕಲೆಕ್ಟ್ ಮಾಡಲಾಗಿತ್ತು. ಅದರಲ್ಲಿ 50 ಕೋಟಿ ರೂಪಾಯಿಗಳಷ್ಟು ಗ್ರ್ಯಾಂಟ್, ಸುಮಾರು 35 ಕೋಟಿ ರೂಪಾಯಿಗಳಷ್ಟು ಲೋನ್ ಒಟ್ಟು ಈ ರೀತಿಯಾಗಿ ನಾವು 120 ಕೋಟಿ ರೂಪಾಯಿಗಳನ್ನು ಪಡೆದುಕೊಂಡು ಬಂದು ಹಣ ಬಿಡುಗಡೆ ಮಾಡಿದ್ದೇವೆ. 20-25 ವರ್ಷಗಳ ಕರ್ನಾಟಕದ ಇತಿಹಾಸದಲ್ಲಿ ಇಷ್ಟೊಂದು ಹಣಕ್ಕಾಗಿ ಅತ್ತು ಕರೆದು, ನಾಲ್ಕೈದು ಸಾರಿ ಮೆಮೊರ್ಯಾಂಡಂಗಳನ್ನು ಕೊಟ್ಟು ಇಷ್ಟೊಂದು ಹಣವನ್ನು ಬಿಡುಗಡೆ ಮಾಡಿಸಿಕೊಂಡಿದ್ದೇವೆ. ಹೋದವರ್ಷ ಮಾನ್ಯ ಪ್ರಧಾನಮಂತ್ರಿಗಳು ಬೀದರ್ ಮತ್ತು ಗುಲ್ಬರ್ಗಾ ಪ್ರವಾಸವನ್ನು ಸಹ ಕೈಗೊಂಡಿದ್ದರು. ಆಗ ಅವರಿಗೆ ನಾವು ಮನವರಿಕೆ ಮಾಡಿ ಇಷ್ಟು ಹಣವನ್ನು ತೆಗೆದುಕೊಂಡಿದ್ದೆವು ಇವತ್ತಿನವರೆಗೆ ನೀವು ಒಂದು ಸಭೆ ಕರೆದು ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಂ ಕೊಟ್ಟಿದ್ದೀರಾ? ಎನ್.ಪಿ.ಸಿ.ಆರ್.ರವರು ಈ ವರ್ಷ ನಮ್ಮ ರಾಜ್ಯಕ್ಕೆ ಕೊಟ್ಟಿರತಕ್ಕಂಥ 48 ಕೋಟಿ ರೂಪಾಯಿಗಳಲ್ಲಿ ಈಗ ನವೆಂಬರ್ ತಿಂಗಳು ಬಂದರೂ ಸಹ 17 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ನಿಮಗೆ ಇರತಕ್ಕಂಥ ಅಲೋಕೇಶನ್‌ನ್ನು ಸಂಪೂರ್ಣವಾಗಿ ಖರ್ಚು ಮಾಡಿಲ್ಲ. ಈ ಹಣವನ್ನು ಖರ್ಚು ಮಾಡದೇ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ನೀವು ಯಾವ ಮಾಹಿತಿಯನ್ನು ಕೊಡುತ್ತೀರಾ? ಯಾವಾಗ ಮಾಹಿತಿಯನ್ನು ಕಳುಹಿಸುತ್ತೀರಾ? ಇದನ್ನು ತಾವು ಸದನಕ್ಕೆ ತಿಳಿಸಬೇಕಾಗುತ್ತದೆ. ಇದಕ್ಕಾಗಿ ಸರ್ಕಾರ ಯಾವುದಾದರೊಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಅಥವಾ ಏನಾದರೊಂದು ಮೆಮೊರ್ಯಾಂಡಂ ತಯಾರು ಮಾಡಿದ್ದೀರಾ? ರಾಜ್ಯದಲ್ಲಿ ಎಷ್ಟು ನಷ್ಟವಾಗಿದೆ ಎಂಬುದಾದರು ತಿಳಿಸಬೇಕು. ಇದನ್ನು ಅಷ್ಟೊಂದು ಸುಲಭವಾಗಿ ತೆಗೆದುಕೊಳ್ಳತಕ್ಕಂಥ ವಿಚಾರವಲ್ಲ. ಇವತ್ತು ಮಳೆಯಿಂದ ಸಾರ್ವಜನಿಕ ಆಸ್ತಿಪಾಸ್ತಿಗಳು ನಷ್ಟವಾಗಿವೆ ಹಾಗೆಯೆ ಬಡವರ ಮನೆಗಳು ಕೊಚ್ಚಿಹೋಗಿವೆ. ಇವರು ಎಲ್ಲಿ ಹೋಗಿ ವಾಸ ಮಾಡಬೇಕು? ಹಾಗೆಯೆ ದನಕರುಗಳು ಸತ್ತು ಹೋಗಿವೆ. ಈ ಸಮಯದಲ್ಲಿ ಸರ್ಕಾರ ತುರ್ತಾಗಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದು ನನ್ನ ದೂರು. ಇದನ್ನು ಸರಿಪಡಿಸುವುದಕ್ಕಾಗಿ ತಾವು ಹಮ್ಮಿಕ್ಕೊಂಡಿರುವ ಎಲ್ಲಾ ಮಾಹಿತಿಗಳನ್ನು ಈ ಸದನಕ್ಕೆ ಕೊಡಬೇಕು. ಮತ್ತೊಮ್ಮೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ. ಬಿ. ಮಲ್ಲಿಕಾರ್ಜುನ (ಬೀರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಹಳಷ್ಟು ಮಳೆಯಿಂದಾಗಿ ಹಾನಿಯಾಗಿರತಕ್ಕಂಥ ವಿಷಯವನ್ನು ಸದನದ ಗಮನಕ್ಕೆ ಮತ್ತು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ನಾನು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ತೀವ್ರವಾದಂಥ ಬರಗಾಲವನ್ನು ನಾವು ಎದುರಿಸಿದ್ದೆವು.

11.30 ಪಿ. ಎಂ

ಅತಿವೃಷ್ಟಿಯಿಂದಾಗಿ ಬೆಳೆ ಹಾಗೂ ರಸ್ತೆಗಳು ಹಾನಿಯಾಗಿರುವ ಬಗ್ಗೆ ನಾವು ಸರ್ಕಾರದ ಗಮನಕ್ಕೆ ತಂದಿರುತ್ತೇವೆ. ಅದಕ್ಕೆ ಸರ್ಕಾರ ಸ್ಪಂದಿಸಿ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಒಂದು ಕೋಟಿ ರೂಪಾಯಿಗಳು ಬಿಡುಗಡೆಯಾದ ಈ ಸಂದರ್ಭದಲ್ಲಿ ಸರ್ಕಾರ ಕೆಲವು ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲ. ನಮ್ಮ ಜಿಲ್ಲೆಯಿಂದ 3 ಜನ ಹಿರಿಯ ಸಚಿವರು ಸಚಿವಸಂಪುಟದಲ್ಲಿದ್ದಾರೆ. ಆ ಸಚಿವರು ಶಾಸಕರುಗಳ ಸಭೆಯನ್ನು ಕರೆದು ಆ ಸಭೆಯಲ್ಲಿ ತೀರ್ಮಾನ ಮಾಡಿ ಎಲ್ಲಿ ಹಾನಿಯಾಗಿದೆ ಅದನ್ನು ಮಾಡಿಸಬೇಕೆಂದು ನಾನು ಹೇಳಿದ್ದೇನೆ. ನಾನು ಜಿಲ್ಲಾಧಿಕಾರಿಗಳನ್ನು ದೂರವಾಣಿ ಮೂಲಕ ಕೇಳಿದ್ದೇನೆ. ಆದರೂ ಅವರಿಗೆ ಇವತ್ತು ಸಭೆಯನ್ನು ಕರೆಯುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಕಾರಣ ಇನ್ನು ಜಿಲ್ಲೆಯ ಉಸ್ತುವಾರಿ ಸಚಿವರು ಯಾರಾಗುತ್ತಾರೆಂದು ಗೊತ್ತಿಲ್ಲದೆ ಇರುವುದರಿಂದ ಇರಬಹುದು. ತುರ್ತಾಗಿ ಏನು ಕಾಮಗಾರಿಗಳ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು ಅದನ್ನು ತೆಗೆದುಕೊಳ್ಳಲಿಕ್ಕೆ ವಿಫಲರಾಗಿರತಕ್ಕಂಥದನ್ನು ನಾವು ಈಗ ಸಭೆಯ ಗಮನಕ್ಕೆ ತಂದರೂ, ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೂ, ಕೆಲಸವನ್ನು ಮಾಡುತ್ತಿಲ್ಲವೆಂದು ಮನಸ್ಸಿನಲ್ಲಿರತಕ್ಕಂಥ ಒಂದು ವೇದನೆಯಾಗಿದೆ. ಹಿಂದೆ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಹೆಚ್. ಕೆ. ಪಾಟೀಲ್‌ರವರು ಬಹಳ ಮಾತನಾಡಿದ್ದರು. ನನ್ನ ಕ್ಷೇತ್ರದಲ್ಲಿ ಒಂದರಿಂದ ಒಂದೂವರೆ ಅಡಿ ಮಣ್ಣು ಕೊಚ್ಚಿಹೋಗಿದೆ. ಒಂದೊಂದು ಕಡೆ ನಾಲ್ಕು ಅಡಿ ಮಣ್ಣು ಕೊಚ್ಚಿಹೋಗಿ ಎರಡು ಕಡೆ ಬೆಳೆ ಹಾನಿಯಾಗಿದ್ದು ನಾವು ನೋಡಿದ್ದೇವೆ. ನಾವು ಸರ್ಕಾರಕ್ಕೆ ಮನವಿ ಮಾಡುವುದಿಷ್ಟೆ ಹೆಚ್. ಕೆ. ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಏನೇನು ಬೇಡಿಕೆಗಳನ್ನು ಮಂಡಿಸಿದ್ದರೂ ಅಷ್ಟಕ್ಕೆ ಇವತ್ತು ಹಣವನ್ನು ಬಿಡುಗಡೆ ಮಾಡಿದರೆ ನಾವು ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ನಮಗೆ ಹೆಚ್ಚಿಗೆ ಏನು ಬೇಕಾಗಿರುವುದಿಲ್ಲ. ಶ್ರೀ ಭೀಮಣ್ಣ ಖಂಡ್ರೆಯವರು ಹಾಗೂ ಶ್ರೀ ಹೆಚ್. ಕೆ. ಪಾಟೀಲ್‌ರವರು ನಾಲ್ಕು ದಿನಗಳವರೆಗೆ ಧರಣಿ ಮಾಡಿ ರೈತರ ಬಗ್ಗೆ ಎಷ್ಟು ಕಾಳಜಿವುಳ್ಳವರಾಗಿರುತ್ತಾರೆಂದು ನಮಗೆ ಅವತ್ತು ಹೆಮ್ಮೆಯಾಗಿತ್ತು. ರೈತರ ಸ್ಥಿತಿಗತಿಗಳ ಬಗ್ಗೆ ಬೇಡಿಕೆಗಳ ಬಗ್ಗೆ ಹೋರಾಟ ಮಾಡುತ್ತಾರೆಂದು ನಮಗೆ ಸಂತೋಷವಾಗಿತ್ತು. ತಾವು ಈಗ ಆಡಳಿತ ಪಕ್ಷದ ಕಡೆಗೆ ಬಂದಿರುತ್ತೀರಿ, ಸರ್ಕಾರದ ಮೇಲೆ ಪ್ರಭಾವವನ್ನು ಬೀರಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ ಏನೇನು ಬೇಡಿಕೆಗಳನ್ನು ಮಂಡಿಸಿದ್ದೀರಿ, ಅದು ನನಗೆ ಜ್ಞಾಪಕವಿದೆ. ಬೇಕಾದರೆ ನಾವು ದಾಖಲೆಗಳನ್ನು 11ನೇ ತಾರೀಖಿಗೆ ಒದಗಿಸುತ್ತೇನೆ. ಒಂದು ಎಕರೆ ಬೆಳೆ ಹಾನಿಗೆ ಪರಿಹಾರವನ್ನು ಎಷ್ಟು ಕೊಡಬೇಕು, ಸತ್ತಿರತಕ್ಕಂಥ ರೈತನಿಗೆ ಎಷ್ಟು ಪರಿಹಾರದ ಹಣವನ್ನು ಕೊಡಬೇಕೆಂದು ಕೇಳಿಕೊಂಡಿದ್ದರೂ ಅಷ್ಟನ್ನು ಕೊಡಿಸಿದರೆ ಸಾಕು. ಮಾನ್ಯ ಕಂದಾಯ ಸಚಿವರು ದಯಮಾಡಿ ಆದೇಶವನ್ನು ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ತುರ್ತಾಗಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರನ್ನು ಕೂಡಲೇ ನೇಮಕಮಾಡಿ ಕಾಮಗಾರಿಗಳನ್ನು ಪ್ರಾರಂಭ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕು. ಆಡಳಿತ ಬಹಳಷ್ಟು ಸ್ಥಗಿತವಾಗಿದೆ, ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಾವು ಬಹಳಷ್ಟು

ಕನಸುಗಳನ್ನು ಕಂಡಿದ್ದೆವು. ಆಡಳಿತ ಬಹಳಷ್ಟು ಚುರುಕಾಗುತ್ತದೆ. ನಾವು ರಾಮರಾಜ್ಯದ ಕನಸುಗಳನ್ನು ಕಂಡಿದ್ದೆವು. ನಮ್ಮ ಜಿಲ್ಲೆಯ ಸಚಿವರಾದ ಶ್ರೀ ಸಗೀರ್ ಅಹಮದ್‌ರವರನ್ನು ಕೇಳಿದರೆ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಆದರೆ ಅವರು ಜಿಲ್ಲೆಯ ವೀಕ್ಷಣೆಯನ್ನು ಮಾಡಿಕೊಂಡು ಬಂದರು. ಆದರೆ ಅವರಿಗೆ ಇನ್ನೂವರೆಗೆ ಒಂದು ಸಭೆಯನ್ನು ಕರೆಯುವುದಕ್ಕೆ ಆಗಿಲ್ಲ. ಮಾನ್ಯ ಹಿರಿಯ ಸಚಿವರಾದ ಶ್ರೀ ಚಂದ್ರೇಗೌಡರಿಗೆ ಸಭೆಯನ್ನು ಕರೆಯುವ ಅಧಿಕಾರವಿಲ್ಲ. ಶ್ರೀಮತಿ ಮೋಟಮ್ಮನವರು ಕೇಳಿದರೆ ಅವರು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೂ ಕೆಲಸವನ್ನು ಮಾಡಲು ಆಗುತ್ತಿಲ್ಲ. ಇಂತಹ ಪರಿಸ್ಥಿತಿ ಏಕೆ ನಿರ್ಮಾಣವಾಯಿತು? ಈರುಳ್ಳಿ ಮತ್ತು ಮೆಣಸಿನಕಾಯಿಯ ಬೆಳೆ ಪೂರ್ಣ ಹಾಳಾಗಿದೆ, ಅಲ್ಲಿ ಎಷ್ಟು ಪರಿಹಾರವನ್ನು ಕೊಡಬೇಕೆಂದು ಇನ್ನು ಚಿಂತನೆ ಮಾಡುವುದಕ್ಕಾಗಿಲ್ಲ. ಎಲ್ಲಾ ವಿಷಯದ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ನನ್ನ ಜಿಲ್ಲೆಗೆ ಆಗಿರುವ ಅನ್ಯಾಯವನ್ನು ಪರಿಹರಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು 6-7 ಕೋಟಿ ರೂಪಾಯಿ ಹಾನಿಯಾಗಿರುವ ಬಗ್ಗೆ ದಾಖಲೆಯಾಗಿದೆ, ಇದು ಯಾವ ಪರಿಸ್ಥಿತಿಯಾಗಿದೆ ಎಂದರೆ, ರಾವಣಾಸುರನ ಹೊಟ್ಟೆಗೆ ಮೂರು ಕಾಸಿನ ಮಜ್ಜಿಗೆ ಎಂದು ನಮ್ಮ ಕಡೆ ಹೇಳುತ್ತಾರೆ. ಇನ್ನು ಹೆಚ್ಚಿಗೆ ಹಾನಿಯಾಗಿದೆ, ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಸಾಲದು, ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತಾ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಕ್ಕಾದರೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕೆಲವೊಂದು ನಿಯಮಗಳು ಇವೆ. ಈ ಚರ್ಚೆಯನ್ನು ವಿಸ್ತರಿಸಿಬೇಕೆಂದು ಇದ್ದರೆ ತಾವು ಹೇಳಿದರೆ ಅದರಂತೆ ನಡೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. 3 ಜನ ಮಾತ್ರ ನಿಲುವಳಿ ಸೂಚನೆಗೆ ಅನುಮತಿಯನ್ನು ಕೇಳಿ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಪರಿವರ್ತನೆ ಮಾಡಿ ಮಾತನಾಡಲು ಅವಕಾಶ ಕೊಟ್ಟಿದ್ದೀರಾ ಅದು ನನಗೆ ಗೊತ್ತಾಗಬೇಕು. ವಿಷಯದ ವ್ಯಾಪ್ತಿಯ ಬಗ್ಗೆ ಎಲ್ಲರೂ ಚರ್ಚೆ ಮಾಡುವಂತಹ ವಿಚಾರ. ಇದು ಗಂಭೀರವಾದಂತಹ ವಿಚಾರ, ಅದಕ್ಕಾಗಿ ನಾನು ಪ್ರಾರಂಭದಲ್ಲಿ ಹೇಳಿದೆ, ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಅದರಲ್ಲಿ ತಮಗೆ ತೃಪ್ತಿಯಾಗದಿದ್ದರೆ ಕೆಲವೊಂದು ವಿಚಾರಗಳನ್ನು ಸೇರಿಸಬಹುದು. ಅದನ್ನು ಬಿಟ್ಟು ಎಲ್ಲರೂ ಚರ್ಚೆ ಮಾಡುವುದು ಎಂದಾದರೆ ಅದನ್ನು ಪರಿವರ್ತನೆ ಮಾಡಬೇಕಾಗುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ನಿಯಮಾವಳಿಯಲ್ಲಿ, ಕಾಲಿಂಗ್ ಅಟೆನ್‌ಷನ್‌ನಲ್ಲಿ ಅನುಮತಿಯಿಲ್ಲವೆಂದು ಒಂದೇ ಕಾರಣಕ್ಕಾಗಿ ರಾಜ್ಯಪಾಲರ ಭಾಷಣದ ಮೇಲೆ ನಾವು ಆ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಇದಕ್ಕೆ ಮಹತ್ವವಾದ ವಿಚಾರವಿದೆ ಎನ್ನುವ ದೃಷ್ಟಿಯಿಂದ ಇದನ್ನು ಯಾವುದಾದರೂ ನಿಯಮದ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ. ಆದರೆ ರಾಜ್ಯದಲ್ಲಿ ಎಲ್ಲಾ ಕಡೆ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು : ಚರ್ಚೆಗೆ ಅವಕಾಶವನ್ನು ಕೊಟ್ಟರೆ ಆ ಮಾತು ಬೇರೆ, 3 ಜನ ಮಾತ್ರ ಮಾತನಾಡಲು ಕಳುಹಿಸಿಕೊಟ್ಟಿದ್ದಾರೆ. ಆ 3 ಜನರು ಮಾತನಾಡಿದ್ದಾರೆ. ಆದರೂ ಕೂಡ

ಒಬ್ಬಿಬ್ಬರು ಮಾತನಾಡಲಿ ಎಂದು ಹೇಳಿದ್ದೇನೆ. ಕೊನೆಯದಾಗಿ ಎಸ್. ಎಸ್. ಪಾಟೀಲರು ಮಾತನಾಡಲಿ.

ಶ್ರೀ ಎ. ರಾಮದಾಸ್ : ಯಾವ ಶಾಸಕರ ಕ್ಷೇತ್ರದಲ್ಲಿ ಸಮಸ್ಯೆಗಳಿವೆ ಆ ಕ್ಷೇತ್ರದ ಶಾಸಕರುಗಳಿಗೆ ಹೇಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಕೆಲವು ನಿಯಮಗಳನ್ನು ಸಡಿಲಿಸಿ ತಾವು ಕೆಲವೊಂದು ಶಾಸಕರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿರುತ್ತೀರಿ. ಶ್ರೀ ಬಸವರಾಜ್ ಹಾಗೂ ಶ್ರೀ ಪಾಪಣ್ಣನವರ ಕ್ಷೇತ್ರದಲ್ಲಿ ಅತಿವೃಷ್ಟಿ ಆದಂತಹ ಸಂದರ್ಭವಿದೆ. ಅಂತಹ ಶಾಸಕರಿಗೆ ಎರಡು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ವಿರೋಧಪಕ್ಷದ ನಾಯಕರೆ, ನನ್ನ ಅಭ್ಯಂತರವೇನು ಇಲ್ಲ, ನಾನು ಏನು ಹೇಳಿದೆನೆಂದರೆ, ನೀವು ನಿಲುವಳಿ ಸೂಚನೆಯನ್ನು ತಂದಿರುತ್ತೀರಿ, ಆದರೂ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಚರ್ಚೆ ಮಾಡುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅವಕಾಶ ಮಾಡಿಕೊಡುವುದಾದರೆ ನನ್ನ ಅಭ್ಯಂತರವೇನು ಇಲ್ಲ. ನನ್ನ ವಾದವೇನೆಂದರೆ, ಯಾರು ನಿಲುವಳಿ ಸೂಚನೆಯ ಮೇರೆ ಸಹಿ ಮಾಡಿದ್ದಾರೆ ಅವರು ಈಗ ಮಾತನಾಡಿದ್ದಾರೆ. ಮಾನ್ಯ ಸಚಿವರು ಹೇಳಿಕೆಯನ್ನು ಮಾಡುತ್ತಾರೆ, ಆ ಹೇಳಿಕೆಯ ಮೇಲೆ ತಾವು ಕ್ಲಾರಿಫಿಕೇಷನ್ ಕೇಳುವುದು ಸಂಪ್ರದಾಯ. ಅದು ಬಿಟ್ಟು ಬರೀ ಚರ್ಚೆಯನ್ನು ಮಾಡುತ್ತಾ ಹೋದರೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನಿಯಮವನ್ನು ಸಡಿಲಿಸಿ ಇಬ್ಬರು ಶಾಸಕರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುತ್ತೀರಿ, ಇನ್ನುಳಿದ ಪಾಪಣ್ಣ ಹಾಗೂ ಬಸವರಾಜ್‌ರವರಿಗೆ ಎರಡು ನಿಮಿಷಗಳು ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು : ಈಗ ಎಸ್. ಎಸ್. ಪಾಟೀಲರು ಮಾತನಾಡುತ್ತಾರೆ, ಆ ನಂತರ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡುತ್ತಾರೆ. ತಮಗೆ ತೃಪ್ತಿಯಾಗದಿದ್ದರೆ ಆಗ ಕ್ಲಾರಿಫಿಕೇಷನ್ ಮುಖಾಂತರ ಮಂತ್ರಿಗಳನ್ನು ಕೇಳಬಹುದು. ಈಗ ನಿಯಮವನ್ನು ಪರಿವರ್ತನೆ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ನಾನು ಮತ್ತೆ 3 ಜನರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಈಗ ಎಸ್. ಎಸ್. ಪಾಟೀಲರು ಮಾತನಾಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೊಡಗು ಜಿಲ್ಲೆಯಲ್ಲಿ ಬಹಳ ಹಾನಿಯಾಗಿದೆ, ಆದ್ದರಿಂದ ನಮಗೂ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು : ನಾನು ಲಿಬರಲ್ ಆಗಿ ಕೊಟ್ಟಿದ್ದೇನೆ. ಬೇಕಾದರೆ ಇನ್ನೊಬ್ಬರು ಮಾತನಾಡಲಿ.

ಶ್ರೀ ಸಿ. ಚೆನ್ನಿಗಪ್ಪ : ಅನಾವೃಷ್ಟಿ ಬಗ್ಗೆ ಬೆಳಕು ಚೆಲ್ಲಬೇಕು. ನಮಗೂ ಮಾತನಾಡಲು ಅವಕಾಶವನ್ನು ಕೊಡಿ, ಅನಂತರ ಮಂತ್ರಿಗಳು ಉತ್ತರವನ್ನು ಹೇಳಲಿ.

ಉಪಾಧ್ಯಕ್ಷರು : ಅನಾವೃಷ್ಟಿಯ ಬಗ್ಗೆ ಮಾತನಾಡುವುದು ಇದ್ದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಿ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, ವಿಷಯ ಬಹಳ ಗಂಭೀರವಾಗಿದೆ. ಪ್ರತಿವರ್ಷ ಸದನದಲ್ಲಿ ಚರ್ಚೆಗೆ ಬರುತ್ತಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ಈ ಸದನದಲ್ಲಿ ಕೆಲವು ಸದಸ್ಯರಾದ ನಾವು ಈ ಬಗ್ಗೆ ಸಲಹೆಗಳನ್ನು ಕೊಡಬೇಕು. ದಯಮಾಡಿ ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ. ಮಳೆ ಒಂದೇ ದಿವಸ ಬರುವಂತದ್ದಲ್ಲ. ಒಂದು ದಿವಸ ಮಳೆ ಬರುತ್ತದೆ, ಒಂದು ವರ್ಷ ಪೂರ್ತಿ ಬೆಳೆ ಹಾಳಾಗುತ್ತದೆ. ಒಂದು ವರ್ಷ ಮಳೆ ಬರದೆ ಬೆಳೆ ಹಾಳಾಗುತ್ತದೆ, ಇದು ಪ್ರತಿ ವರ್ಷ ಸದನದಲ್ಲಿ ಚರ್ಚೆಯಾಗತಕ್ಕಂಥ ವಿಚಾರ. ದಯಮಾಡಿ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟರೆ ಶಾಸಕರು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಡುವವರಿದ್ದಾರೆ. ಅದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬಹುದು ಆದ್ದರಿಂದ ಚರ್ಚೆಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಶ್ರೀ ಡಿ. ಬಿ. ಚಂದ್ರೇಗೌಡ : ತಾವು ಹಿರಿಯ ಸದಸ್ಯರಾಗಿರುತ್ತೀರಿ, ನಾನು ಹೇಳಿದ್ದನ್ನು ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಈ ಸಭೆಯ ಸಂಪ್ರದಾಯಗಳ ಬಗ್ಗೆ ಮಾತನಾಡುತ್ತೇವೆ. ಯಾರು ನೋಟೀಸ್ ಕೊಟ್ಟಿದ್ದಾರೋ ಅವರು ಮಾತನಾಡಿದ್ದಾರೆ. ಅದನ್ನು ಪರಿವರ್ತನೆ ಮಾಡಿ ಇನ್ನೂ ಹೆಚ್ಚಿನ ಶಾಸಕರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಮಾನ್ಯ ಶಿವಪ್ಪನವರೆ, ನಾನು ಹೇಳುವುದಾದರೂ ಇಷ್ಟೆ, ಇದರ ಗಂಭೀರತೆಯನ್ನು ಕಡಿಮೆ ಮಾಡಬೇಕೆಂದಾಗಲಿ ಹೆಚ್ಚು ವಿಚಾರಗಳು ಮನದಟ್ಟಾಗಬೇಕೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ, ನಿಲುವಳಿ ಸೂಚನೆಗೆ ಕಳುಹಿಸಿರುವುದು 3 ಜನ ಶಾಸಕರು ಮಾತ್ರ ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡಲಿ. ಆಮೇಲೆ ಆ ವಿಷಯದ ಮೇಲೆ ಕ್ಲಾರಿಫಿಕೇಷನ್ ಮಾಡಬಹುದೆಂದು ನಾನೇ ಹೇಳಿದೆ. ಆದರೂ ಚರ್ಚೆಗೆ ಅವಕಾಶವನ್ನು ಕೊಡುವುದಾದರೆ ಉಪಾಧ್ಯಕ್ಷರಿಗೆ ಸೇರಿದ ವಿಚಾರ. ನಿಯಮಾವಳಿಯನ್ನು ಪರಿವರ್ತನೆ ಮಾಡಿ ಹೆಚ್ಚಿನ ಶಾಸಕರಿಗೆ ಅವಕಾಶ ಮಾಡಿಕೊಡುವುದಾದರೆ ನನ್ನ ಅಭ್ಯಂತರವೇನಿಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ : ತಾವು ತಿಳಿಸಿದ ಹಾಗೆ ನಿಯಮಾವಳಿಗಳನ್ನು ಬದಿಗಿಟ್ಟು ಚರ್ಚೆ ಮಾಡುವುದಾದರೆ ಮಾಡಲಿ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಉಪಾಧ್ಯಕ್ಷರೆ, ಎಲ್ಲರಿಗೂ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ಸದನದಲ್ಲಿ ಎಲ್ಲರೂ ಅವರವರ ಜಿಲ್ಲೆಗೆ ಮತ್ತು ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾತನಾಡಬೇಕೆಂದು ಹೇಳುತ್ತಾರೆ. ಆದ್ದರಿಂದ ತಾವು ಎಲ್ಲರಿಗೂ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಈಗ ತಾವು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು 3 ಜನರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರೆಲ್ಲರೂ ರಾಜ್ಯದ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದಾರೆ. ರಾಜ್ಯದ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಕಂದಾಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ ತಾವು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುತ್ತದೆ. ತಾವು ಚರ್ಚೆಗೆ ಅವಕಾಶವನ್ನು

ಮಾಡಿಕೊಟ್ಟರೆ ಹೇಗೆ ಆಗುತ್ತದೆಂದು ತಾವು ಹೇಳಬೇಕು.ಈಗಾಗಲೇ 3 ಜನರಿಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇಲ್ಲ ಅಂದರೆ ನಮ್ಮ ಜಿಲ್ಲೆ ಮತ್ತು ತಾಲ್ಲೂಕುಗಳ ಬಗ್ಗೆ ನಾವು ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು. ನೀವು ಮಾತನಾಡುವುದು ಬೇಡವೆಂದು ಯಾರು ಹೇಳಿದರು. ನಾವು ಮಾತನಾಡುವವರಿದ್ದರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಂಸದೀಯ ಸಚಿವರಾದ ಶ್ರೀ ಡಿ. ಬಿ. ಚಂದ್ರೇಗೌಡರು ನಿಯಮಾವಳಿಗಳ ಪ್ರಕಾರ ನಡೆಯಬೇಕೆಂದು ಹೇಳಿದರು, ಅವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಾರ್ವಜನಿಕ ಮಹತ್ವದ ವಿಚಾರ ಬಂದಾಗ ಸ್ವಲ್ಪ ನಿಯಮಾವಳಿಗಳನ್ನು ಬದಿಗೊತ್ತಿ, ಜನರ ಭಾವನೆಗಳಿಗೆ ನಮ್ಮ ಶಾಸಕರುಗಳು ಹೇಗೆ ಸ್ಪಂದನೆ ಮಾಡುತ್ತಾರೆ ಎನ್ನುವುದಕ್ಕೆ ಈ ಸಂದರ್ಭದಲ್ಲಿ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು : ನಾನು ಈಗಾಗಲೇ ಈ ಬಗ್ಗೆ ಮಾತನಾಡಲು 3 ಜನರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಆದರೂ ಕೂಡ ನಾನು ನಿಯಮಗಳನ್ನು ಸಡಿಲ ಮಾಡಿ ಮತ್ತೇ 3 ಜನರಿಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಆದ್ದರಿಂದ ದಯವಿಟ್ಟು, ಒಂದು ಕೆಲಸ ಮಾಡೋಣ, ಈಗ ಮಾನ್ಯ ಎಸ್. ಎಸ್. ಪಾಟೀಲರಿಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಅವರು ಮಾತನಾಡಿದ ಮೇಲೆ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಶಾಸಕರಾದ ಶ್ರೀ ಪಾಪಣ್ಣನವರು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು.

ಉಪಾಧ್ಯಕ್ಷರು : ಈಗ ಪಾಪಣ್ಣನವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟರೆ ಮತ್ತೆ ಬೇರೆ ಶಾಸಕರುಗಳು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಾರೆ. ಇದು ಹೇಗೆ ಆಗುತ್ತದೆ. ಈಗ ತಾವು ಮಂತ್ರಿಗಳ ಕ್ಲಾರಿಫಿಕೇಷನ್ನನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಕಡೆ ಇಬ್ಬರು ಶಾಸಕರಿಗೆ ಮಾತನಾಡಲು ದಯವಿಟ್ಟು ಅವಕಾಶವನ್ನು ಮಾಡಿಕೊಡಿ. ಒಂದಿಬ್ಬರಿಗೆ ಮಾತನಾಡಲು ಅವಕಾಶವನ್ನು ಕೊಡುವುದರಿಂದ ಯಾವುದೇ ಆತಂಕವಾಗುವುದಿಲ್ಲ. ದಯವಿಟ್ಟು ಒಂದೆರಡು ನಿಮಿಷ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು : ನಿಯಮದ ಪ್ರಕಾರ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಬರುವುದಿಲ್ಲ. ಆದಾಗ್ಯೂ ಕೂಡ ನಾನು ಸ್ವಲ್ಪ ಲಿಬರಲ್ ಆಗಿ ಹೇಳಿದ್ದೇನೆ. ಈಗ ಮಾನ್ಯ ಎಸ್. ಎಸ್. ಪಾಟೀಲರಿಗೆ ಒಂದೆರಡು ನಿಮಿಷ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ.

+ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಗಂಭೀರವಾದ ಸಮಸ್ಯೆಯಿರುವ ಬಗ್ಗೆ ಚರ್ಚೆಯಾಗಿದೆ. ನಾನು ಆಡಳಿತ ಪಕ್ಷದಲ್ಲಿ ಕುಳಿತಿದ್ದಾಗ ಏನು ಮಾತನಾಡಿದ್ದೆ ಇಲ್ಲಿ ಕುಳಿತಾಗ ಬದಲಾಗಿ ಮಾತನಾಡುವುದಿಲ್ಲ. ಏಕೆಂದರೆ ನಮ್ಮ

ವಿರೋಧಪಕ್ಷದ ನಾಯಕರಾದಂಥ ಹೆಚ್. ಕೆ. ಪಾಟೀಲರು ಈಗ ಆಡಳಿತ ಪಕ್ಷದಲ್ಲಿದ್ದಾರೆ. ಅವರು ಇಲ್ಲಿ ಕುಳಿತಾಗ ಏನು ಮಾತನಾಡಿದ್ದರೋ ಅಲ್ಲಿ ಕುಳಿತಾಗಲೂ ಅದೇ ಮಾತನ್ನು ಆಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಆದರೆ ನಾನು ಮಾತ್ರ ಆಡಳಿತಪಕ್ಷದಲ್ಲಿದ್ದಾಗ ಏನು ಮಾತನಾಡಿದ್ದೆನೋ ಇಲ್ಲಿ ಕುಳಿತಾಗ ಬೇರೆ ಮಾತನಾಡುವುದಿಲ್ಲ. ಇವತ್ತು ಇಲ್ಲಿ ಪ್ರಶ್ನೆ ಇರುವುದೇನೆಂದರೆ ಸರ್ಕಾರದಲ್ಲಿ ಇದಕ್ಕೆ ಹಣವಿದೆಯೇ? ಇದು ನಮ್ಮ ಮುಂದಿರುವಂತಹ ಪ್ರಶ್ನೆ? ಸುಮ್ಮನೆ ನಾವು ಹಿಂದೆ ಪ್ರಶ್ನೆ ಮಾಡುವಾಗ ಕೌನ್ಸಿಲ್‌ನಲ್ಲಿ ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸರ್ಕಾರದಲ್ಲಿ ಎಲ್ಲಿ ಹಣವಿದೆ, ಸುಮ್ಮನೆ ಏಕೆ ಚರ್ಚೆ ಮಾಡುತ್ತೀರಿ ಎಂದು ನಾನು ಹೇಳಿದಾಗ ನೀವು ರೈತ ವಿರೋಧಿ ಎಂದು ಮಾತನಾಡಿದರು. ಆದರೆ ಇವತ್ತು ರೈತರಿಗೆ ಆದಷ್ಟು ಹಾನಿಯನ್ನು ಕನಿಷ್ಟ ಒಂದು ರೂಪಾಯಿನ ಹಾನಿಯಲ್ಲಿ ಕನಿಷ್ಟ ನಾಲ್ಕಾಣೆ ಯನ್ನು ತುಂಬಿಕೊಡುವಂತಹ ಶಕ್ತಿ ಸರ್ಕಾರದಲ್ಲಿದೆಯೇ? ಎನ್ನುವುದು ಕೂಡ ಇಲ್ಲಿ ಚರ್ಚೆಯಾಗಬೇಕಾಗುತ್ತದೆ. ಸುಮ್ಮನೆ ನಾವು ಏನಾದರೂ ಒಂದು ಹೇಳಿ ಇಲ್ಲಾ ಎಕರೆಗೆ 4 ರಿಂದ 10 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಹೇಳಿದರೂ ಅವರು ಕೊಡಲಿಲ್ಲ ನಾವು ಹಣವನ್ನು ಕೊಡಿಸಲಿಲ್ಲ. ಆದರೆ ಸರ್ಕಾರದಲ್ಲಿ ಹಣಕಾಸಿನ ಲಭ್ಯತೆಯನ್ನು ಯಾವ ರೀತಿಯಾಗಿ ನಾವು ಮೊಬಿಲೈಜ್ ಮಾಡಬೇಕು ಎಂದು ಪ್ರಶ್ನೆ ಇದೆ. ನಾನು ಹಿಂದೆ ಮೇಲ್ಮನೆಯಲ್ಲಿ ಚರ್ಚೆ ಮಾಡುವಾಗ ಹೇಳಿದ್ದೆ ಎಲ್ಲಾ ಲೋಕಸಭಾ ಸದಸ್ಯರುಗಳಿಗೆ ಹಾಗೂ ಪ್ರಧಾನಮಂತ್ರಿಗಳಿಗೂ ಎಲ್ಲಾ ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೆ. ಬಹಳಷ್ಟು ಜನರಿಂದ ನಮಗೆ ಉತ್ತರಗಳು ಬಂದಿದೆ. ಇದರ ಬಗ್ಗೆ ದಯವಿಟ್ಟು ಕೇಂದ್ರದಲ್ಲಿ ಪ್ರತಿ ವರ್ಷ ರೈತರ ಕಲ್ಯಾಣ ನಿಧಿ ಎಂದು 10 ಸಾವಿರ ಕೋಟಿ ರೂಪಾಯಿ ಹಣವನ್ನು ಇಡಬೇಕೆಂದು ನಾನು ಪತ್ರವನ್ನು ಬರೆದಿದ್ದೆ. ಅದರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಬರೆದು ಬಹಳಷ್ಟು ಜನ ಎಂ. ಪಿ. ಗಳು ಇದರ ಬಗ್ಗೆ ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ. ದುರ್ದೈವ್‌ದಿಂದ ಏನಾಗಿದೆ ಎಂದರೆ, ಇವತ್ತು ಯಾರಿಗೂ ರೈತರ ಬಗ್ಗೆ ಕಳಕಳಿಯಿಲ್ಲ. ಸುಮ್ಮನೆ ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಕಳೆದ ಸಲ ಪ್ರಧಾನಮಂತ್ರಿಗಳು ರಾಜ್ಯಕ್ಕೆ ಭೇಟಿ ನೀಡಿದಾಗ ನಾವೆಲ್ಲರೂ ಹೋಗಿ ಮಾನ್ಯ ಮುಖ್ಯಮಂತ್ರಿಗಳು ನನ್ನಿಂದ ಒಂದು ಪತ್ರವನ್ನು ಬರೆಸಿ ನೀನೆ ತೆಗೆದುಕೊಂಡು ಹೋಗಿ ಕೊಡು ಎಂದು ಹೇಳಿದರು. ಅದರಂತೆ ನಾನು ಕೊಟ್ಟು ಬಂದೆ. ಕನಿಷ್ಟ 50 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದೆ. ಆಗ ಅವರು ಹಣ ಎಲ್ಲಿದೆ ಪಾಟೀಲರೆ ಎಂದು ಕೇಳಿದರು. ಇವತ್ತು 50 ರಿಂದ 100 ಕೋಟಿ ರೂಪಾಯಿಗಳನ್ನು ಕೊಟ್ಟರೆ ಆಗುವುದಿಲ್ಲ. ನಾವು 200 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಟ್ಟರೂ ಕೂಡ ಸಾಲುವುದಿಲ್ಲ. ಆದರೂ ಪರಿಹಾರದ ಹಣವನ್ನು ಕೊಡಲಿಕ್ಕೆ ಕೇಂದ್ರ ಸರ್ಕಾರದಲ್ಲೂ ಹಣವಿಲ್ಲ, ರಾಜ್ಯ ಸರ್ಕಾರದಲ್ಲೂ ಹಣವಿಲ್ಲ ಇದು ನಮ್ಮಲ್ಲಿರತಕ್ಕಂಥ ಪ್ರಶ್ನೆ. ಮಾನ್ಯ ಸಭಾನಾಯಕರಿಗೆ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ದಯವಿಟ್ಟು ರಾಷ್ಟ್ರಮಟ್ಟದಲ್ಲಿ ಕೂಡ ಎಲ್ಲಾ ಮುಖ್ಯಮಂತ್ರಿಗಳು ಒಟ್ಟಾಗಿ ಸೇರಿ ಚರ್ಚೆ ಮಾಡಿ, ರೈತರ ಕಲ್ಯಾಣ ನಿಧಿ ಎಂದು ಕೇಂದ್ರ ಬಜೆಟ್‌ನಲ್ಲಿ ವರ್ಷಕ್ಕೆ 10,000 ಕೋಟಿ ರೂಪಾಯಿಗಳನ್ನು ತೆಗೆದಿಡುವಂಥ ವ್ಯವಸ್ಥೆಯಾಗದಿದ್ದರೆ ಇಲ್ಲಿ ಸುಮ್ಮನೆ ನಾವು ಚರ್ಚೆ ಮಾಡುತ್ತೇವೆ, ನಾವು ಯಾವ ರೈತರಿಗೂ ಉಪಕಾರವನ್ನು ಮಾಡುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು ಮೊದಲನೆಯದಾಗಿ ನಾನು ಹೇಳುತ್ತಿದ್ದೇನೆ. ಅನಂತರ ನಮ್ಮ ಬಜೆಟ್‌ನಲ್ಲೂ ಕೂಡ ಈ ಒಂದು

ಹಣವನ್ನು ತೆಗೆದಿಡಬೇಕು. ಇದು ಹೇಗೆ ತೆಗೆದಿಡಲು ಸಾಧ್ಯವಿಲ್ಲವೆಂದು ಕೆಲವರು ಹೇಳಿದರು. ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರು ಇದ್ದಾಗಲೂ ಕೂಡ ಈ ಬಗ್ಗೆ ಸೂಚನೆಯನ್ನು ನಾನು ಇಟ್ಟಿದ್ದೆ. ಆ ದಿವಸ ಅವರು ಹಣಕಾಸಿನ ಇಲಾಖೆಯವರನ್ನು, ವ್ಯವಸಾಯ ಇಲಾಖೆಯವರನ್ನು ಎಲ್ಲರನ್ನೂ ಕರೆಸಿದ್ದರು. ಈ ಹಣವನ್ನು ಹೇಗೆ ಕೊಡುವುದು, ಎಲ್ಲಿದೆ ಹಣವೆಂದು ಕೇಳಿದರು. ದುರ್ದೈವದಿಂದ ಮುಂದಿನ ತಿಂಗಳಲ್ಲಿ ನೌಕರರಿಗೆ ಸಂಬಳವನ್ನು ಕೊಡುವುದಕ್ಕೆ 35,000 ಕೋಟಿ ರೂಪಾಯಿಗಳನ್ನು ಅವರೆ ತೆಗೆದರು. ಆದರೆ ಅವರಿಗೆ ರೈತರಿಗೆ ಹಣವನ್ನು ಕೊಡುವುದಕ್ಕೆ 10,000 ಕೋಟಿ ರೂಪಾಯಿಗಳು ಅವರ ಹತ್ತಿರ ಇರಲಿಲ್ಲ. ನಾವು ಇಲ್ಲಿ 500 ಕೋಟಿ ರೂಪಾಯಿಗಳನ್ನು ಕೊಡೋಣವೆಂದು ಹೇಳಿದರೂ ಇಲ್ಲವೆಂದು ಹೇಳಿದರೂ ಆದರೆ ನೌಕರರಿಗೆ 800 ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಎಲ್ಲಿಂದ ಹಣವನ್ನು ತಂದರು ಇದು ಇವತ್ತು ದೇಶದ ಮುಂದೆ ಇರತಕ್ಕಂಥ ಚರ್ಚೆ. ಅದರ ಮೇಲೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ. ಇದರ ಬಗ್ಗೆ ಚರ್ಚೆಯನ್ನು ಮಾಡೋಣ. ನಿಮ್ಮ ಸರ್ಕಾರದಲ್ಲಿ ಹಣವಿದೆಯೋ ಇಲ್ಲವೋ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಹೇಳಬೇಕು. ಸುಮ್ಮನೆ ನಾವು ಚರ್ಚೆ ಮಾಡುತ್ತಾ ಎಕರೆಗೆ 2 ರಿಂದ 3 ಸಾವಿರ ರೂಪಾಯಿಗಳನ್ನು ಕೊಡಿ ಎಂದು ನಾವು ಹೇಳುವುದು, ನೀವು ಸುಮ್ಮನೆ ಕೊಡುತ್ತೀನೆಂದು ಹೇಳುತ್ತೀರಿ. ನಾವು ಬಹಳ ಕೊಟ್ಟಿದ್ದೇವೆಂದು ಉತ್ತರವನ್ನು ಕೊಡುತ್ತೀರಿ. ನಾವು ಅದೇ ರೀತಿ ಉತ್ತರವನ್ನು ಅದೇ ರೀತಿ ಉತ್ತರವನ್ನು ಕೊಟ್ಟಿದ್ದೇವೆ ಇಲ್ಲವೆಂದು ಹೇಳುವುದಿಲ್ಲ. ಆದರೆ ಇವತ್ತು ರೈತನಿಗೆ ಎಷ್ಟು ಪರಿಹಾರಧನ ಮುಟ್ಟಬೇಕು ಅಷ್ಟು ಹಣ ಮುಟ್ಟುವುದಕ್ಕೆ ಆಗುವುದಿಲ್ಲ. ಈ ವಿಚಾರದ ಬಗ್ಗೆ ಪಕ್ಷಾತೀತವಾಗಿ ಚರ್ಚೆಯನ್ನು ಮಾಡೋಣ. ಸುಮ್ಮನೆ ಇಲ್ಲಿ ಕುಳಿತಾಗ ಬೇರೆ ಮಾತನಾಡುವುದು, ಅಲ್ಲಿ ಕುಳಿತಾಗ ಬೇರೆ ಮಾತನಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ನಾವು ರೈತರಿಗೆ ಸಹಾಯವನ್ನು ಮಾಡಬೇಕಾಗಿದೆ, ಆದರೆ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಸರ್ಕಾರ ಬೇಕಾದಷ್ಟು ಮಾಡಿದೆ. ಆದರೂ ಕೂಡ ನಾವು ಮಾಡಿರುವುದು ಸಾಕಾಗಲಿಲ್ಲ. ಈ ಕಾರಣದಿಂದ ಮಾನ್ಯ ಕಂದಾಯ ಸಚಿವರು ದಯವಿಟ್ಟು ಇದರ ಬಗ್ಗೆ ಸರಿಯಾದಂಥ ಉತ್ತರವನ್ನು ಕೊಡಬೇಕು. ನಿಮ್ಮಲ್ಲಿ ಹಣದ ಲಭ್ಯತೆ ಎಷ್ಟಿದೆ? ಈ ರಾಜ್ಯದಲ್ಲಿ ಒಂದು ಎಕರೆಗೆ ಎಷ್ಟು ಹಣವನ್ನು ಕೊಡಬಹುದು. ಈ ರಾಜ್ಯದಲ್ಲಿ ಎಷ್ಟು ಹಾನಿಯಾಗಿದೆ, ಇವತ್ತು ಜಿಲ್ಲಾವಾರು ರೈತರಿಗೆ ಎಷ್ಟು ಹಾನಿಯಾಗಿದೆ ಎಂಬುದರ ಬಗ್ಗೆ ತಾವು ಹೇಳಬೇಕು. ಕೇವಲ ಅತಿವೃಷ್ಟಿ ಆಗಿರುವುದನ್ನು ಮಾತ್ರ ಹೇಳುತ್ತೇವೆ, ಅನಾವೃಷ್ಟಿಯಿಂದಲೂ ಸಹ ಹಾನಿಯಾಗಿದೆ. ಉದಾಹರಣೆಗೆ ಗದಗ್ ಜಿಲ್ಲೆಯ ಬಗ್ಗೆ ನಾನು ಹೇಳುವುದೇನೆಂದರೆ, ಅದರಂತೆ ಕೋಲಾರ ಹಾಗೂ ಬೇರೆ ಬೇರೆ ಜಿಲ್ಲೆಗಳಲ್ಲೂ ಆಗಿದೆ; ನಾನು ಇಲ್ಲವೆಂದು ಹೇಳುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಮಳೆಯಿಂದ ಹಾನಿಯಾಗಿದೆ, ಆದರೆ ಹಾನಿಯಾದಂಥ ರೈತನ ಬಗ್ಗೆ ನಮ್ಮದು ಕಳಕಳಿಯಿಲ್ಲ. ಇವತ್ತು ಕೇವಲ ಮಳೆಯಾದ ಬಗ್ಗೆ ಅಷ್ಟೆ ಮಾತನಾಡುತ್ತೇವೆ. ಮಾನ್ಯ ಚಿಮ್ಮನಕಟ್ಟಿಯವರ ತಾಲ್ಲೂಕಿನಲ್ಲೂ ಹಾಗೂ ಜಿಲ್ಲೆಯಲ್ಲೂ ಸಹ ಅದೇ ಪರಿಸ್ಥಿತಿಯಾಗಿದೆ. ಆದ್ದರಿಂದ ಈ ಕಾರಣದಿಂದ ದಯವಿಟ್ಟು ಈ ಸದನಕ್ಕೆ ಸಂಪೂರ್ಣವಾದ ವಿವರವನ್ನು ನೀಡಬೇಕು. ನಿಮ್ಮಲ್ಲಿ ಹಣಕಾಸಿನ ಲಭ್ಯತೆ ಎಷ್ಟಿದೆ? ಒಂದು ಎಕರೆಗೆ ನೀವು ಎಷ್ಟು ಹಣವನ್ನು ಕೊಡಬಹುದು. ಯಾವ ರೀತಿಯಾಗಿ ನೀವು ಹಣವನ್ನು ಕೊಡಿಸುತ್ತೀರಿ ಎನ್ನುವುದನ್ನು ಕೂಡ ತಾವು ದಯವಿಟ್ಟು ಹೇಳಬೇಕೆಂದು ತಮ್ಮ ಮುಖಾಂತರ

ಮಾನ್ಯ ಮಂತ್ರಿಗಳನ್ನು ಮತ್ತು ಮುಖ್ಯಮಂತ್ರಿಗಳನ್ನು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ಸಗೀರ್‌ಅಹಮದ್ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ಈ ಸದನದ ಸಂಪ್ರದಾಯ ಹೇಗೆ ಇತ್ತೆಂದರೆ ಯಾವುದೇ ವಿರೋಧ ಪಕ್ಷದ ನಾಯಕರಾಗಲಿ, ಅಥವಾ ಇತರೆ ವಿರೋಧ ಪಕ್ಷದ ನಾಯಕರಾಗಲಿ ತಮ್ಮನ್ನು ಅನುಮತಿಯನ್ನು ಕೇಳಿದಾಗ, ಸಂಬಂಧಪಟ್ಟಿರುವಂಥ ಮಂತ್ರಿಗಳು ಉತ್ತರವನ್ನು ಕೊಡುವುದು ಸ್ವಾಭಾವಿಕ. ಅವರು ಉತ್ತರವನ್ನು ಕೊಟ್ಟ ತಕ್ಷಣ ತಾವು ಏನು ತೀರ್ಮಾನವನ್ನು ಮಾಡುತ್ತೀರಿ, ಆ ತೀರ್ಮಾನಕ್ಕೆ ಸರ್ಕಾರಕ್ಕೆ ಕೇಳಬೇಕಾಗುತ್ತದೆ; ವಿರೋಧಪಕ್ಷದವರು ಸಹ ಕೇಳಬೇಕಾಗುತ್ತದೆ. ಮೊದಲು ಕಂದಾಯಮಂತ್ರಿಗಳು ಉತ್ತರಿಸುವುದಕ್ಕೆ ತಾವು ಆದೇಶವನ್ನು ಮಾಡಿದರೆ, ಪ್ರಾಯಶ: ಅವರು ಮಾತನಾಡುವುದೇ ಆಗಲಿ, ನಾವೇ ಮಾತನಾಡುವುದೇ ಆಗಲಿ ಸುಲಭವಾಗುತ್ತದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಎಂ ಚೆನ್ನಿಗಪ್ಪ : ನಮ್ಮ ಪಾರ್ಟಿಯವರಿಂದ ನಾವು ಯಾರೂ ಕೇಳುತ್ತಿಲ್ಲ, ನಾವು ಒಂದೇ ಒಂದು ಚಾನ್ಸ್ ಕೇಳುತ್ತಿರುವುದು.

ಶ್ರೀ ಬಿ. ಸೋಮಶೇಖರ್ : ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಇದೆ ಪರಿಸ್ಥಿತಿ ಇದೆ. ನಾವೆಲ್ಲರೂ ಕೂಡ ನಮ್ಮ ನಮ್ಮಗಳ ಭಾವನೆಗಳನ್ನು ವ್ಯಕ್ತಪಡಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ನಾವು ನಿಗಧಿ ಮಾಡಿ ಮತ್ತೆ ಮಾತನಾಡಬಹುದು. ಈಗ ತಾವು ಒಂದು ಕೆಲಸ ಮಾಡಿ, ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಮೇಲೆ ನಿಮ್ಮದು ಏನು ಇದೆ ಎಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿದೆ; ಅದಕ್ಕೆ ಏನು ಅಡ್ಡಿ ಇಲ್ಲ.

ಶ್ರೀ ಸಿ. ಎಂ ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಮಾತನಾಡಲು ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು : ಈಗ ಮಾನ್ಯ ಚೆನ್ನಿಗಪ್ಪನವರು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಮತ್ತೆ ಬೇರೆ ಯಾರು ಮಾತನಾಡುವುದು ಬೇಡ.

ಶ್ರೀ ಸಿ. ಎಂ ಚೆನ್ನಿಗಪ್ಪ : ನಾನು ಸರ್ಕಾರವನ್ನು ವಿನಂತಿ ಮಾಡುವ ಮುಖಾಂತರ, ಇವತ್ತೇನು ನಮ್ಮ ರಾಜ್ಯದಲ್ಲಿ ಹೆಚ್ಚು ಮಳೆಯಿಂದಾಗಿ ಆಗಿರಕ್ಕಂಥ ಹಾನಿಯ ಬಗ್ಗೆ......

ಉಪಾಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರೆ, ಒಂದು ನಿಮಿಷ ತಾವು ಯೀಲ್ಡ್ ಆಗಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಗಾಂಭೀರ್ಯತೆಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದದ್ದು ಸಂಪ್ರದಾಯ. ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಈಗ ಮಾನ್ಯ

ಕಂದಾಯ ಸಚಿವರು ಹೇಳಿಕೆಯನ್ನು ಕೊಡುತ್ತಾರೆ. ಹೇಳಿಕೆಯ ನಂತರ ತಮಗೇನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬಹುದು. ಹೆಚ್ಚು ಹಾನಿಯಾಗಿದ್ದರೆ ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ಕಂದಾಯ ಮಂತ್ರಿಗಳು ಹೇಳುತ್ತಾರೆ. ಆಮೇಲೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಇದೆ. ಚರ್ಚೆ ಮಾಡಬೇಕೆಂದರೆ ನೋಟೀಸ್ ಕೊಡಬೇಕಾಗುತ್ತದೆ. ನೋಟೀಸ್ ಕೊಟ್ಟರೆ ಆಗ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿರುತ್ತದೆ. ನೋಟೀಸ್ ಇರುವುದು ಏಕೆಂದರೆ, ಒಂದು ಸದನದ ಸಂಪ್ರದಾಯ. ಮತ್ತೊಂದು ಆ ನೊಟೀಸ್ ಇದ್ದರೆ ಸರ್ಕಾರ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಅನೇಕ ವಿಚಾರಗಳು ಇರುತ್ತವೆ. ಮತ್ತೊಂದು ಮಾನ್ಯ ಎಸ್. ಎಸ್. ಪಾಟೀಲರು ಹೊಸದಾಗಿ 10 ಸಾವಿರ ಕೋಟಿ ರೂಪಾಯಿ ಪರಿಹಾರ ಕೊಡುವುದಕ್ಕೆ ಇಡಬೇಕೆಂದಿದ್ದಾರೆ. ಅದಕ್ಕೆ ಏನಾದರೂ ಮಾಡಬೇಕಲ್ಲ, ಉತ್ತರ ಹೇಳದಿದ್ದರೆ ಸರ್ಕಾರದ ಮೇಲೆ ಒಳ್ಳೆಯ ಅಭಿಪ್ರಾಯವಿರುವುದಿಲ್ಲ. ತತ್‌ಕ್ಷಣ ಇರತಕ್ಕ ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯಾರವರು, ಭೈರೇಗೌಡರು ಮತ್ತು ಬಚ್ಚೇಗೌಡರು ಏನು ನೋಟೀಸ್ ಕೊಟ್ಟಿದ್ದಾರೆ ಅದು ಸೀಮಿತವಾಗಿ ಈಗ ನಡೆದಿರತಕ್ಕ ನೆರೆಹಾವಳಿ ವಿಶೇಷವಾಗಿ ಮಳೆಯಿಂದ ಆಗಿರತಕ್ಕ ತೊಂದರೆ. ಅದಕ್ಕೆ ಸರ್ಕಾರ ಏನು ಪರಿಹಾರ ಕೊಟ್ಟಿದೆ ಅಷ್ಟಕ್ಕೆ ಸೀಮಿತಗೊಳಿಸಿಕೊಂಡರೆ ಉತ್ತರ ಕೊಡಬಹುದು. ಇಲ್ಲ ವಾಸ್ತವವಾಗಿ ತಮ್ಮ ವಿಸ್‌ಡಂನಲ್ಲಿ ಹೆಚ್ಚು ಚರ್ಚೆಮಾಡಬೇಕೆಂದಿದ್ದರೆ ಪರಿವರ್ತನೆ ಮಾಡಿ ಚರ್ಚೆ ಮಾಡೋಣ. There are unpteem umber of Rules and Regulations in our farme work ಅದನ್ನು ಮಾಡಬಹುದು. ಅದಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ ಈ ನೋಟೀಸ್‌ನಲ್ಲಿ ಮಾತನಾಡುವುದಕ್ಕೆ ಅಥವಾ ಈ ನೋಟೀಸ್ ವ್ಯಾಪ್ತಿಯನ್ನು ಮೀರಿ ಮಾತನಾಡುವುದು ಇದ್ದರೆ ಸರ್ಕಾರಕ್ಕೆ ಉತ್ತರ ಕೊಡುವುದು ಕಷ್ಟವಾಗುತ್ತದೆಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಮ್ಮಲ್ಲಿ ನನ್ನ ಮನವಿ ಇಷ್ಟೆ, ಅವರು ತಮ್ಮಲ್ಲಿ ಏನು ಸೀಮಿತವಾದ ಪ್ರಶ್ನೆಯನ್ನು ಹೇಳಿದ್ದಾರೆ ಅದಕ್ಕೆ ಅವರು ಉತ್ತರ ಕೊಡಲಿ. ಆಮೇಲೆ ಕ್ಲಾರಿಫಿಕೇಶನ್ ಕೇಳಲಿ. ಏನೇನು ಉತ್ತರ ಕೊಡುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳಾದ ಚಂದ್ರೇಗೌಡರು ಹೇಳಿದರು. ನಿಯಮಗಳ ಬಗ್ಗೆ ಹೇಳಿದರು, ನಾವು ಇವತ್ತು ನಿಯಮಗಳ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೇವೆ. ಕೆಲವು ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ನಿಯಮವನ್ನು ಸಡಿಲಿಸಿ ಮಾತನಾಡಲಿಕ್ಕೆ ಕೆಲವು ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ನಿಯಮವನ್ನು ಸಡಿಲಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ತಮ್ಮ ತಮ್ಮ ಕ್ಷೇತ್ರಗಳಲ್ಲಿದ್ದಂಥ ಸಮಸ್ಯೆಗಳ ಬಗ್ಗೆ ತಮ್ಮ ಭಾವನೆಗಳನ್ನು ಸ್ಪಂದನೆ ಮಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಇನ್ನೊಂದು ಎರಡು ಮೂರು ಜನರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಮಂತ್ರಿಗಳು ಉತ್ತರ ಕೊಡುತ್ತಾರೆ. ನಾಳೆ ಮತ್ತೆ ಕ್ಲಾರಿಫಿಕೇಶನ್ ಮತ್ತೆ ಚರ್ಚೆ ಅದೆಲ್ಲ ಬೇಡ.

ಉಪಾಧ್ಯಕ್ಷರು : ಈಗ ಅದೆಲ್ಲ ಬೇಡ ಸರ್ಕಾರದಲ್ಲಿ ಮಾಹಿತಿ ಇರಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಸದಸ್ಯರು ಅವರ ತಾಲ್ಲೂಕಿನಲ್ಲಿ ಕ್ಷೇತ್ರದ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಜನರಲ್ ಆಗಿ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಿಲ್ಲ.

ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ಇಷ್ಟೆ, ನೀವು ಏನು ಕೇಳಿದ್ದೀರಿ ಅಷ್ಟಕ್ಕೆ ಅವರ ಹತ್ತಿರ ಉತ್ತರವಿದೆ. ಒಂದು ವೇಳೆ ಈ ನಿಲುವಳಿ ಸೂಚನೆಯನ್ನು ಬದಲಾಯಿಸಿ 11ನೇ ತಾರೀಖಿನ ನಂತರ ನಿಯಮ 69ರ ಕೆಳಗೆ ಸಮಗ್ರ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ಅವಕಾಶವಿದೆ. ನಾನು ಹೇಳುವುದನ್ನು ದಯವಿಟ್ಟು ಕೇಳಿ, ನಿಯಮಾವಳಿ ಪ್ರಕಾರ ಮೂರು ಜನರಿಗೆ ಅಷ್ಟೆ ಮಾತನಾಡಲಿಕ್ಕೆ ಅವಕಾಶ ಕೊಡಬಹುದು. ಆದರೂ ಕೂಡ ಇದೊಂದು ಜ್ವಲಂತ ಸಮಸ್ಯೆ ಇರುವುದರಿಂದ ಮೂರು ಜನರಿಗಿಂತ ಹೆಚ್ಚಾಗಿ ಇನ್ನು ಇಬ್ಬರು ಮೂವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಇದನ್ನು ಬೆಳೆಸುತ್ತಾ ಹೋದರೆ ಇದನ್ನು ಕನ್ವರ್ಟ್ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬರುತ್ತಾರೆ. ಮಂತ್ರಿಗಳು ಆಮೇಲೆ ಉತ್ತರ ಹೇಳಲಿ. ಸಾಧ್ಯವಾದರೆ ಉತ್ತರ ಹೇಳಲಿ, ಉತ್ತರ ಹೇಳಿದ ನಂತರ ಕ್ಲಾರಿಫಿಕೇಶನ್ ಕೇಳಲಿಕ್ಕೆ ಅವಕಾಶವಾಗುತ್ತದೆ.

ಉಪಾಧ್ಯಕ್ಷರು : ಸಮಗ್ರ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಈ ನಿಲುವಳಿ ಸೂಚನೆಯನ್ನು ಬದಲಾಯಿಸಿ ನಿಯಮ 69ರ ಕೆಳಗೆ 11ನೇ ತಾರೀಖಿನ ನಂತರಸಮಗ್ರ ಚರ್ಚೆಗೆ ಅವಕಾಶ ಮಾಡಿಕೊಡೋಣ. ಇದು ಜ್ವಲಂತ ಸಮಸ್ಯೆ. ಈಗ ಎಲ್ಲರೂ ದಯವಿಟ್ಟು ಸಹಕರಿಸಬೇಕು. ಈಗ ಮಾನ್ಯ ಚೆನ್ನಿಗಪ್ಪನವರು ಒಂದು ನಿಮಿಷದಲ್ಲಿ ಮುಗಿಸಿ ನಂತರ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಉತ್ತರದ ನಂತರ ತಾವು ಕೇಳಬಹುದು.ಈಗ ನಾನು ಚೆನ್ನಿಗಪ್ಪನವರನ್ನು ಕರೆದಿದ್ದೇನೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರ ಹೇಳುತ್ತಾರೆ, ಅದು ಸಂಪ್ರದಾಯವಿದೆ. ಆದರೆ ನಾನು ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಪರಿಹಾರವನ್ನು ಕೊಡುವಂತಹ ವಿಚಾರದಲ್ಲಿ ಮನೆ ಕಳೆದುಕೊಂಡಿರತಕ್ಕ ರೈತರಿಗೆ ಮೊಟ್ಟಮೊದಲು ಅವರಿಗೆ ವಾಸ ಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಪರಿಹಾರವಾಗಿ ಮನೆಗಳನ್ನು ಕೊಡಬೇಕು. ಅನಂತರ ಬೆಳೆ ಮತ್ತು ಇತರ ದಾಸ್ತಾನುಗಳ ನಷ್ಟಕ್ಕೆ ಪರಿಹಾರವನ್ನು ಕೊಡಬೇಕು. ಮನೆ ಕಳೆದುಕೊಂಡಿರುವ ರೈತರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಕೊಡುವ 500 ರೂಪಾಯಿಗಳು ಏನಿದೆ ಅದಕ್ಕಿಂತ ಹೆಚ್ಚಿನ ಹಣವನ್ನು ಕೊಡಬೇಕು. ಅವರು ಮನೆಯಲ್ಲಿ ವಾಸ ಮಾಡಲಿಕ್ಕೆ ಕನಿಷ್ಟ ಸೌಲಭ್ಯವನ್ನು ಸರ್ಕಾರ ಮಾಡಿಕೊಡಬೇಕು. ಮಾನ್ಯ ಕಂದಾಯ ಸಚಿವರು ತುಮಕೂರು ಜಿಲ್ಲೆಯಾಗಬಹುದು ರಾಜ್ಯದ ಯಾವುದೇ ಜಿಲ್ಲೆಯಾಗಬಹುದು ಅದರ ವರದಿಯನ್ನು ತರಿಸಿಕೊಂಡು ರೈತರ ಬೆಳೆ ಹಾನಿಯಾಗಿರಬಹುದು ಯಾವುದೇ ರೀತಿಯ ಹಾನಿಯಾಗಿರಬಹುದು. ಅಲ್ಲಿಯ ಒಂದು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಎಲ್ಲ ಶಾಸಕರನ್ನು ಕರೆದು ಒಂದು ಮೀಟಿಂಗ್ ಮಾಡಿ, ಜಿಲ್ಲಾಧಿಕಾರಿಗಳ ಮುಖಾಂತರ ವರದಿಯನ್ನು ತರಿಸಿಕೊಂಡು ಅವರ ಮುಖಾಂತರ ಪರಿಹಾರವನ್ನು ಕೂಡಲೇ ಕೊಡಬೇಕೆಂದು ಹೇಳಿ, ತಮ್ಮ ಮುಖಾಂತರ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1999ನೇ ಸಾಲಿನಲ್ಲಿರಾಜ್ಯದಾದ್ಯಂತ ಮುಂಗಾರು ಮಳೆಯು ಸೆಪ್ಟೆಂಬರ್ ತಿಂಗಳ 25ರವರೆಗೆ ದುರ್ಬಲವಾಗಿದ್ದು ಹಲವು ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿಯು ತಲೆದೋರಿತ್ತು. ರಾಜ್ಯದಲ್ಲಿ ಸಾಮಾನ್ಯ ಮಳೆಗಿಂತ 9 ಪರ್ಸೆಂಟ್ ಕಡಿಮೆ ಬಿದ್ದಿದ್ದು ಈ ಪರಿಸ್ಥಿತಿ ಉದ್ಭವಿಸಿತ್ತು. ಆದರೆ ಸೆಪ್ಟೆಂಬರ್ ತಿಂಗಳ ಅಂತ್ಯಭಾಗದಲ್ಲಿ ಹಾಗೂ ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ಹಲವು ಕಡೆ ಮತ್ತೆ ಮಳೆ ಪ್ರಾರಂಭವಾಗಿದ್ದು ಅಭಾವ ಪರಿಸ್ಥಿತಿ ಮತ್ತು ಕುಡಿಯುವ ನೀರಿನ ದುಸ್ಥಿತಿಯು ಸ್ವಲ್ಪಮಟ್ಟಿಗೆ ಸುಧಾರಿಸಲಾಗಿತ್ತು. ಆದರೆ ಗ್ರಾಮೀಣಭಾಗದಲ್ಲಿ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಅನುದಾನ ಬಿಡುಗಡೆ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶೀಲನೆಯಲ್ಲಿದೆ. ಅಕ್ಟೋಬರ್ ಮೊದಲನೇ, ಎರಡನೇ ಹಾಗೂ ಮೂರನೆಯ ವಾರಗಳಲ್ಲಿ ರಾಜ್ಯಾದ್ಯಂತ ಮಳೆಯು ಹೆಚ್ಚಾಗಿದ್ದು ಕೆಲವು ಕಡೆ ಸರಾಸರಿ ಸಾಮಾನ್ಯ ಮಳೆಗಿಂತ ಹೆಚ್ಚಿನ ಮಳೆಯಾಗಿ ಪ್ರವಾಹ ಪರಿಸ್ಥಿತಿ ಸಹ ಉಂಟಾಗಿದ್ದು ವಿಶೇಷವಾಗಿ ಧಾರವಾಡ, ಚಿತ್ರದುರ್ಗ, ಚಿಕ್ಕಮಗಳೂರು ಇಲ್ಲಿ ಮಳೆ ಜಾಸ್ತಿಯಾಗಿ ಹಾನಿಯಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ವರದಿಯನ್ನು ತರಿಸಿ ಪರಿಹಾರ ಕಾರ್ಯಗಳಿಗೆ ಅನುದಾನವನ್ನು ಕೋರಿದ್ದರು. ಕೆಲವು ಕಡೆ ಪ್ರಾಣಹಾನಿಯಾಗಿ ಮನೆಗಳು ಬಿದ್ದಿದ್ದು ಸ್ವಲ್ಪಮಟ್ಟಿಗೆ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯಾಗಿರುತ್ತದೆ. ಈ ಕುರಿತು ದಿನಾಂಕ 21-10-99ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪ್ರಕೃತಿ ವಿಕೋಪದ ಪರಿಹಾರ ನಿಧಿಯ ಆಡಳಿತ ಹಾಗೂ ನಿರ್ವಹಣಾ ಸಮಿತಿಯ ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ಜಿಲ್ಲಾಧಿಕಾರಿಗಳಿಂದ ಬಂದ ಬೇಡಿಕೆ ವರದಿ ಹಾಗೂ ಪ್ರಸ್ತುತ ಜಿಲ್ಲಾಧಿಕಾರಿಗಳ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿರುವ ಬಾಕಿ ಹಣವನ್ನು ಪರಿಗಣಿಸಿ ಹೆಚ್ಚಿನ ಮಳೆ ಪ್ರವಾಹದ ಹಾನಿಗಾಗಿ ರೂಪಾಯಿ 280 ಲಕ್ಷ ರೂಪಾಯಿಗಳನ್ನು ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ. ಧಾರವಾಡ 100 ಲಕ್ಷ ಹಾಸನ 30 ಲಕ್ಷ ಚಿಕ್ಕಮಗಳೂರು 100 ಲಕ್ಷ ಚಿತ್ರದುರ್ಗ 50 ಲಕ್ಷ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಮೊನ್ನೆ ಹೆಚ್ಚಿನ ರೀತಿಯಲ್ಲಿ ಧಾರಾಕಾರವಾಗಿ ಮಳೆಯಾಗಿ ಅತಿ ಹೆಚ್ಚಿನ ನಷ್ಟ ಸಂಭವಿಸಿದೆ. ಜಿಲ್ಲಾಧಿಕಾರಿಗಳು ನಿನ್ನೆತಾನೇ ಒಂದು ವರದಿಯನ್ನು ತರಿಸಿದ್ದಾರೆ. ಅದು ಶೀಘ್ರವಾಗಿ ಪರಿಶೀಲನೆಯಲ್ಲಿದೆ. ಆದಷ್ಟು ಜಾಗ್ರತೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಮಾನ್ಯ ಭೈರೇಗೌಡರೇ ನೀವು ಎಲ್ಲಿ ಹೋದರೂ ಆತುರವಾಯಿತಲ್ಲ ನಾನು ಹೇಳುತ್ತಿದ್ದೇನೆ ಸ್ವಲ್ಪ ತಡಿರಿ ಸ್ವಾಮಿ. ನಮಗೆ ಹೇಳಿಕೆ ಕಾಪಿ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಪುನ: ಪ್ರಸ್ತಾಪ ಮಾಡುತ್ತೇನೆ ಯಾರು ಏನು ತಪ್ಪು ತಿಳಿದುಕೊಳ್ಳಬೇಡಿ. ಯಾವುದೇ ಸಂಸದೀಯ ನಡವಳಿಕೆಯಲ್ಲಿ ನೀವು ನೋಟೀಸ್ ಕೊಟ್ಟಿದ್ದರೆ ನಿಮಗೆ ಕಾಪಿ ಸಿಗುತ್ತದೆ. ಬೆಳಿಗ್ಗೆ ಪ್ರಸ್ತಾಪ ಮಾಡಿ ಉತ್ತರ ಹೇಳಿ ಅಂದರೆ ಸರ್ಕಾರ ಕೂಡ ಭಗವಂತನಲ್ಲ. ಇಲ್ಲೇ ಸೃಷ್ಟಿ ಮಾಡುವುದಕ್ಕಾಗುವುದಿಲ್ಲ

ಶ್ರೀ ಸಿ. ಭೈರೇಗೌಡ : ತಮ್ಮ ಗಮನಕ್ಕೆ ತರುವುದಾದರೆ, ನೀವು ಹೇಳಿರತಕ್ಕ ವಿಧಾನವನ್ನು ನಾವು ಸಹ ಅನುಸರಿಸಿದ್ದೇವೆ. ನೋಟೀಸ್‌ಗೆ ರುಜು ಮಾಡಿರತಕ್ಕವರಲ್ಲಿ ನಾನೂ ಸಹ ಒಬ್ಬ.

ಆದರಿಂದ ನಾನು ಅವರ ಹೇಳಿಕೆಯ ಪ್ರತಿಯನ್ನು ಕೇಳುತ್ತಿದ್ದೇನೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಸ್ವಲ್ಪ ನಾನು ಹೇಳಿದ್ದನ್ನು ಒಪ್ಪುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಒಪ್ಪುತ್ತೇನೆ. ಆದರೆ ತಾವು ಕೊಟ್ಟಿರತಕ್ಕದ್ದು ನಿಲುವಳಿ ಸೂಚನೆ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ, ನನಗೂ ಸಂಸದೀಯ ವ್ಯವಹಾರದಲ್ಲಿ ಸ್ವಲ್ಪ ಅನುಭವವಿದೆ. ನಿಲುವಳಿ ಸೂಚನೆ ಕೊಟ್ಟ ತಕ್ಷಣ ಉತ್ತರ ಕೊಟ್ಟ ಯಾವುದಾದರೂ ಒಂದು ಕಾಪಿ ತರಿಸಿ ಕೊಟ್ಟರೆ, ನಾನು ಅದಕ್ಕೆ ಹೇಳಿದ್ದು ಉತ್ತರ ತಯಾರು ಮಾಡಿ, ಅದಕ್ಕೆ ಗಾಂಭೀರ್ಯ ಇರಬೇಕು ತಮ್ಮ ನಿಲುವಳಿ ಸೂಚನೆಗೆ ಬೆಲೆ ಬರಬೇಕೆಂದು ಉತ್ತರ ಹೇಳಿಸಿದ್ದೇವೆ.

ಶ್ರೀ ಸಿ. ಭೈರೇಗೌಡ : ಇಲ್ಲಿ ಚರ್ಚೆ ಮುಗಿದ ಮೇಲೆ ಕಾಪಿ ಕೊಟ್ಟರೆ ಏನು ಪ್ರಯೋಜನ? ಚರ್ಚೆಗೆ ಉತ್ತರ ಕೊಡುವಾಗ ಅದರಲ್ಲಿ ಏನಿದೆ ಎಂಬುದನ್ನು ನಾವು ಸಹ ನೋಡಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಈಗ ಅವರು ಹೇಳುವುದನ್ನು ಕೇಳಿ, ಆಮೇಲೆ ಕೊಡುತ್ತಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ವಿರೋಧಪಕ್ಷದ ನಾಯಕರು ಹಾಗೂ ಅನೇಕ ಜನ ಮಿತ್ರರು ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ಸಮರೋಪಾದಿಯಲ್ಲಿ ಎಂದು ಹೇಳಿದ್ದಾರೆ ಮಾನ್ಯ ಬಚ್ಚೇಗೌಡರು. ನಮಗೆ ಸುದ್ದಿ ಮುಟ್ಟಿದ ತಕ್ಷಣ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮುಖ್ಯಕಾರ್ಯದರ್ಶಿಗಳು ಮತ್ತು ಸಂಬಂಧಪಟ್ಟ ಕಾರ್ಯದರ್ಶಿಗಳವರಲ್ಲಿ ಚರ್ಚೆ ಮಾಡಿ ಒಂದರ ಸಭೆಯನ್ನು ಕರೆದು ಬಹುಮುಖ್ಯವಾಗಿ ಧಾರವಾಡ ಚಿಕ್ಕಮಗಳೂರು ಅವೊತ್ತಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಹಾನಿ ಅಲ್ಲಿ ಆಗಿತ್ತು.

12.00 ಪಿ. ಎಂ

ತಮಗೆಲ್ಲ ಗೊತ್ತಿದೆ ಸತ್ತವರಿಗೆ ಏನು ಪರಿಹಾರ ಕೊಡಬೇಕು, ಸಾರ್ವಜನಿಕವಾಗಿ ಹಾನಿಯಾಗಿದ್ದಕ್ಕೆ ಎಷ್ಟು ಹಣ ಕೊಡಬೇಕು ಎನ್ನತಕ್ಕಂಥದ್ದನ್ನು ನಾವೆಲ್ಲರೂ ಗೊತ್ತು ಮಾಡಿದ್ದೇವೆ. ಸುಮಾರು 26 ಮಂದಿ ಜೀವ ಕಳೆದುಕೊಂಡವರಿಗೆ ಒಂದೊಂದು ಲಕ್ಷ ರೂಪಾಯಿ ಪರಿಹಾರವನ್ನು ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆ. ಮನೆಗಳನ್ನು ಕಳೆದುಕೊಂಡವರಿಗೆ, ಗುಡಿಸಲು ಕಳೆದುಕೊಂಡವರಿಗೆ ಪ್ರಪ್ರಥಮವಾಗಿ ಹತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಸತ್ತವರ ಕುಟುಂಬಗಳಿಗೆ ಹಣ ತಲುಪಿದೆ. ಬಿಡುಗಡೆ ಮಾಡಿರತಕ್ಕಂಥ ಹಣ ಸಾಲದು ಎನ್ನುವುದರ ಬಗ್ಗೆ ತ್ವರಿತವಾಗಿ ಸಭೆಯನ್ನು ಕರೆದು ಬಹುಮುಖ್ಯವಾಗಿ ಮಂಡ್ಯ ಜಿಲ್ಲೆಯಲ್ಲಿ........

ಶ್ರೀ ಸಿ. ಭೈರೇಗೌಡ : ಒಟ್ಟು ಎಷ್ಟು ಜನ ಸತ್ತಿದ್ದಾರೆ? ಕೊಟ್ಟಿರುವ ಒಟ್ಟು ಹಣ ಎಷ್ಟು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : 26 ಜನ ಸತ್ತಿದ್ದಾರೆ. ಒಟ್ಟು ಎಷ್ಟು ಹಣ ಎಂದು ನಾನು ಹೇಳಿದ್ದೇನೆ. ಇದನ್ನೆಲ್ಲ ಕನ್ಸಾಲಿಡೇಟ್ ಮಾಡಿ ಒಟ್ಟಿಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು

ಸಲ್ಲಿಸುತ್ತಿದ್ದೇವೆ. ಇದಕ್ಕೆ ಇನ್ನೂ ಸ್ವಲ್ಪ ಕಾಲ ಬೇಕಾಗಿದೆ. ಜಿಲ್ಲಾಧಿಕಾರಿಗಳ ವರದಿ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ 715 ಲಕ್ಷ ರೂಪಾಯಿಗಳ ಹಾನಿಯಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 381 ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ. ಚಿಕ್ಕಮಗಳೂರಿನ ಡಿ. ಸಿ. ಯವರು 751 ರೂಪಾಯಿಗಳ ಹಾನಿಯಾಗಿರತಕ್ಕದ್ದನ್ನು ತಿಳಿಸಿದ್ದಾರೆ. ನಿನ್ನೆ ತಾನೆ ಸುಮಾರು 18 ಕೋಟಿ ರೂಪಾಯಿ ಲುಕ್ಸಾನಿನ ಬಗ್ಗೆ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಮುದ್ದಾಂ ಕಳಿಸಿಕೊಟ್ಟಿದ್ದಾರೆ. ಇದನ್ನೆಲ್ಲ ಪರಿಶೀಲನೆ ಮಾಡುವುದಕ್ಕೆ ಮುಖ್ಯಮಂತ್ರಿಗಳ........

ಒಬ್ಬ ಸದಸ್ಯರು : ಮೈಸೂರು ಜಿಲ್ಲೆಗೆ ಒಟ್ಟು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮೈಸೂರು ಜಿಲ್ಲೆಯದ್ದು ಕೂಲಂಕಷವಾಗಿ ಪರಿಶೀಲನೆಯಲ್ಲಿದೆ. ಇನ್ನೂ ನಮಗೆ ರಿಪೋರ್ಟ್ ಬಂದಿಲ್ಲ. ಹುಣಸೂರು ತಾಲ್ಲೂಕಿನದ್ದು ಕಳಿಸಿಕೊಟ್ಟಿದ್ದಾರೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಆಗಿರತಕ್ಕಂಥ ಹಾನಿಯನ್ನು ಕನ್ಸಾಲಿಡೇಟ್ ಮಾಡಿಕಳಿಸುತ್ತಿದ್ದಾರೆ....

ಶ್ರೀ ಹೆಚ್. ಸಿ. ಬಸವರಾಜು : ಎಷ್ಟೋ ಜನ ಪ್ರಾಣ ಕಳೆದುಕೊಂಡಿದ್ದಾರೆ, ಹದಿನೈದು ದಿವಸಗಳಿಂದ ಎಷ್ಟೋ ಕೆರೆಕಟ್ಟೆಗಳು ಒಡೆದುಹೋಗಿವೆ. ಇನ್ನೂ ವರದಿ ಬಂದಿಲ್ಲವೆಂದರೆ ಹೇಗೆ? ವರದಿ ಬಂದಿಲ್ಲವೆಂದು ಸರ್ಕಾರ ಹೇಳುತ್ತಿರುವುದು ನಮಗೆ ನಂಬುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ತ್ವರಿತವಾಗಿ ಕ್ರಮ ಕೈಗೊಂಡಿರುವ ಜಿಲ್ಲೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಆ ಜಿಲ್ಲೆಗಳಿಗೆ ನಾವು ಪರಿಹಾರ ಹಣವನ್ನು ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡುತ್ತೇವೆ. ಎಲ್ಲ ಜಿಲ್ಲೆಗಳಲ್ಲೂ ಕೆಲಸ ಪ್ರಾರಂಭ ಮಾಡೋಣ. ಎಲ್ಲೆಲ್ಲಿ ತೊಂದರೆಯಾಗಿ, ಅನಾನುಕೂಲವಾಗಿದೆ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಿ ತ್ವರಿತವಾದ ಕಾರ್ಯವನ್ನು ಪ್ರಾರಂಭ ಮಾಡುತ್ತದೆ.

ಗೊಂದಲ

ಶ್ರೀ ಎ. ರಾಮದಾಸ್ : ಸರ್ಕಾರ ಉತ್ತರವನ್ನು ಹೇಳುವಾಗ ಸಮಗ್ರವಾದಂಥ ವಿಚಾರಗಳನ್ನು ನಾವು ಅಪೇಕ್ಷೆ ಮಾಡಿದ್ದೆವು. ಮೈಸೂರು ಜಿಲ್ಲೆಯಿಂದ ಬಂದಿರುವಂಥ ವರದಿ ನಮ್ಮ ಒಬ್ಬ ಶಾಸಕರ ಕೈಯಲ್ಲಿದೆ. ಆದರೆ ಸರ್ಕಾರ ಅದು ಇನ್ನೂ ಬಂದಿಲ್ಲವೆಂದು ಹೇಳುತ್ತಿದೆ. ಸುಮಾರು 587 ಲಕ್ಷದಷ್ಟು ನಷ್ಟವಾಗಿರುವ ಬಗ್ಗೆ ವರದಿಯನ್ನು ಜಿಲ್ಲಾಧಿಕಾರಿಗಳು ಕೃಷಿ ಸಚಿವರಿಗೆ ಕಳಿಸಿಕೊಟ್ಟಿದ್ದಾರೆ. ಆದರೆ ಸನ್ಮಾನ್ಯ ಕಂದಾಯ ಸಚಿವರು ಹೇಳುವಾಗ ಮೈಸೂರು ಜಿಲ್ಲೆಯಿಂದ ವರದಿ ಬಂದಿಲ್ಲವೆಂದು ಹೇಳುವುದು ಆಶ್ಚರ್ಯಪಡಬೇಕಾದ ಸಂಗತಿಯಾಗಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಯಾವ ಜಿಲ್ಲೆಯ ವರದಿ ಇವತ್ತು ನಮಗೆ ತಲುಪಿದೆ ಅದರ ಬಗ್ಗೆ ತೀರ್ಮಾನ ಮಾಡಿ ಇವತ್ತು, ನಾಳೆ ಸಭೆ ಕರೆದು ಪರಿಹಾರವನ್ನು ಘೋಷಣೆ ಮಾಡುತ್ತೇವೆ; ಮತ್ತು ಕೆಲಸ ಪ್ರಾರಂಭ ಮಾಡುತ್ತೇವೆ.

ಒಬ್ಬ ಸದಸ್ಯರು : ಆ ಜನ ಇವತ್ತು ಮನೆಗಳನ್ನು ಕಳೆದುಕೊಂಡು ಬೀದಿಪಾಲಾಗಿದ್ದಾರೆ.

(ಸನ್ಮಾನ್ಯ ಸದಸ್ಯರಾದ ಶ್ರೀ ಚಂದ್ರಕಾಂತ ಬೆಲ್ಲದ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಪರಿಹಾರವನ್ನು ಶೀಘ್ರವಾಗಿ, ತ್ವರಿತವಾಗಿ ಕೊಡುತ್ತೇವೆ ಎನ್ನತಕ್ಕದ್ದನ್ನು ಸರ್ಕಾರ ಹೇಳುತ್ತಿದೆ. ಕೆಲಸವನ್ನು ನಾವು ಪ್ರಾರಂಭ ಮಾಡಿಸುತ್ತೇವೆ. ಇದರ ಬಗ್ಗೆ ಯಾವ ಸಂಕೋಚವನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಮಾನ್ಯ ಸದಸ್ಯರುಗಳು ಇವತ್ತು ಏನೇನು ಮಾತನಾಡಿದ್ದೀರಿ, ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅದನ್ನು ಯಾವ ರೀತಿ ಪರಿಹಾರ ಮಾಡಬಹುದು ಎನ್ನತಕ್ಕಂಥಾದ್ದನ್ನು ಶೀಘ್ರವಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಸಿ. ಭೈರೇಗೌಡ : ಬಿತ್ತನೆ ಆಗಿರತಕ್ಕಂಥ ಪ್ರದೇಶಗಳ ಬಗ್ಗೆ ತಾವು ಹೇಳಿದ್ದೀರಿ. ನಮ್ಮಲ್ಲಿ ಸೆಪ್ಟೆಂಬರ್-ಅಕ್ಟೋಬರ್‌ರವರೆಗೆ ಮಳೆಯಾಗಿಲ್ಲ. ಮತ್ತೆ ರಾಜ್ಯದಲ್ಲಿ ಅನೇಕ ಭಾಗಗಳಲ್ಲಿ ಬಿತ್ತನೆಯಾಗಿಲ್ಲ. ಬಿತ್ತನೆಯೇ ಆಗದೇ ಇರತಕ್ಕಂಥ ರೈತರ ಗತಿ ಏನಾಗಬೇಕು? ಅವರಿಗೆ ಏನು ಪರಿಹಾರ ಕೊಡುತ್ತಿದ್ದೀರಿ? ಇದರ ಬಗ್ಗೆ ತಾವು ಏನು ಆಲೋಚನೆ ಮಾಡಿದ್ದೀರಿ? ಅಲ್ಲಿ ಮೇವಿನ ಸಮಸ್ಯೆ ಇದೆ, ಕುಡಿಯುವ ನೀರಿನ ಸಮಸ್ಯೆ ಇದೆ. ದರ ಬಗ್ಗೆ ತಾವೇನೂ ಪ್ರಸ್ತಾಪ ಮಾಡಿಲ್ಲ. ನಮ್ಮ ಜಿಲ್ಲೆಯಲ್ಲಿ ಎರಡೂ ತಾಲ್ಲೂಕಿನಲ್ಲಿ ಮಳೆ ಹೆಚ್ಚಿಗೆ ಬಿದ್ದು ಜನ ಸತ್ತಿದ್ದಾರೆ. ಅವರ ಬಗ್ಗೆ ತಾವೇನೂ ಪ್ರಸ್ತಾಪ ಮಾಡಿಲ್ಲ. ವರದಿ ಇನ್ನೂ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಹಾಗಾದರೆ ತಾವೇನು ಮಾಡುತ್ತಿದ್ದೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಸತ್ತವರಿಗೆ ಒಂದೊಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡತಕ್ಕದ್ದನ್ನು ಸರ್ಕಾರ ಕೊಟ್ಟೇಕೊಡುತ್ತದೆ.

ಶ್ರೀ ಸಿ. ಭೈರೇಗೌಡ : ಕೋಲಾರ ಜಿಲ್ಲೆಯಲ್ಲಿ ಎರಡು ತಾಲ್ಲೂಕಿನಲ್ಲಿ ಜನರು ಸತ್ತಿರುವುದು ನಿಜವೆ? ಅಲ್ಲಿ ಕೆಲವು ಕಡೆ ಅತಿವೃಷ್ಟಿಯಾಗಿದೆ. ಅಲ್ಲಿ ಏನು ಹಣ ಬಿಡುಗಡೆ ಮಾಡಿದ್ದೀರಿ? ಇಷ್ಟು ಅಸಹಾಯಕತೆ ಏಕೆ ಎಂದು ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಜಿಲ್ಲಾಧಿಕಾರಿಗಳಿಗೆ ದುಡ್ಡನ್ನು ರಿಲೀಸ್ ಮಾಡಿ ಸತ್ತವರಿಗೆ ಪರಿಹಾರ ಕೊಡಿಸುತ್ತಿದ್ದೇವೆ.

ಶ್ರೀ ಸಿ. ಭೈರೇಗೌಡ : ಆ ಪರಿಹಾರ ಆಯಿತು. ಆದರೆ ಅಲ್ಲಿ ಮಳೆ ಬಿದ್ದು ಹಾನಿಯಾಗಿರತಕ್ಕಂಥ ರೈತರಿಗೆ ಏನು ಮಾಡಿದ್ದೀರಿ? ಅವರಿಗೆ ಏನು ಪರಿಹಾರ ಕೊಡುತ್ತಿದ್ದೀರಿ? ಈಗ ಬೇರೆ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಿದ್ದೀರಿ. ಆದರೆ ಕೋಲಾರ ಜಿಲ್ಲೆಗೆ ಏಕೆ ಬಿಡುಗಡೆ ಮಾಡಿಲ್ಲ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಎಲ್ಲ ಜಿಲ್ಲೆಗಳಿಗೂ ಬಿಡುಗಡೆ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ : ಎಲ್ಲ ಮುಗಿದ ಮೇಲೆ ಏನು ಮಾಡುತ್ತೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಏನು ಮುಗಿದುಹೋಗುತ್ತದೆ ಪ್ರಾರಂಭ ಆಗದೆ ಮುಗಿಯುವುದು ಎಲ್ಲಿ ಬಂತು?

ಶ್ರೀ ಸಿ. ಭೈರೇಗೌಡ : ಬಿತ್ತನೆಯಾಗದೇ ಇರತಕ್ಕಂಥ ಕಡೆ ಏನು ಮಾಡುತ್ತೀರಿ? ಅದನ್ನಾದರೂ ಹೇಳಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಏನು ಮಾಡಬೇಕು ಎಂದು ಅದನ್ನು ಪರಿಶೀಲನೆ ಮಾಡಿಸುತ್ತಿದ್ದೇವೆ.

ಶ್ರೀ ಸಿ. ಭೈರೇಗೌಡ : ಸುಮಾರು ಮೂರು ತಿಂಗಳಿನಿಂದ ಬಿತ್ತನೆ ಆಗಬೇಕಾಗಿತ್ತು. ಆವಾಗ ಮಳೆ ಇಲ್ಲದೆ ಬಿತ್ತನೆಯಾಗಿಲ್ಲ. ಇದರ ಬಗ್ಗೆ ಇನ್ನೂ ನೀವು ಪರಿಶೀಲನೆ ಮಾಡುತ್ತಿದ್ದೀರಾ? ಇದಕ್ಕೆ ಮೂರು ತಿಂಗಳು ಬೇಕಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಆಗ ಮಳೆಯಾಗಿರಲಿಲ್ಲ....

ಶ್ರೀ ಸಿ. ಭೈರೇಗೌಡ : ಆ ಪ್ರಶ್ನೆ ಬೇರೆ. ಸರ್ಕಾರಕ್ಕೂ ಮಳೆಗೂ ಸಂಬಂಧ ಇಲ್ಲ. ಸರ್ಕಾರ ಆಜ್ಞೆ ಮಾಡಿ'ಮಳೆಯೇ ನಿಲ್ಲು' ಅಥವಾ 'ಬಾ' ಎಂದು ಹೇಳುವ ಶಕ್ತಿ ನಿಮಗೆ ಇದ್ದರೆ ಮಾಡಿ ನೋಡೋಣ. ದಯವಿಟ್ಟು ಬಿತ್ತನೆಯಾಗದಿರುವ ಪ್ರದೇಶ ಗಳಿಗೆ ಏನು ಮಾಡುತ್ತಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಸಿ. ಭೈರೇಗೌಡ : ಎಷ್ಟು ದಿವಸ ಪರಿಶೀಲನೆ ಮಾಡುತ್ತೀರಿ? ಈಗಾಗಲೇ ಮೂರು ತಿಂಗಳಾಗಿದೆ. ದನಕರುಗಳಿಗೆ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಎಲ್ಲ ಕಡೆ ಸಮೃದ್ಧಿಯಾಗಿ ಮಳೆಯಾಗಿ ಕೆರೆ, ಕಟ್ಟೆ, ಜಲಾಶಯಗಳೆಲ್ಲ ತುಂಬಿರುವಾಗ ನಿಮ್ಮಲ್ಲಿ ಮಳೆಯಾಗಿಲ್ಲವೆಂದರೆ ಏನು ಮಾಡೋಣ? ಮಳೆಯಾಗಿಲ್ಲ ಎಂದರೆ ಎಂದರೆ ಅದು ನಿಮ್ಮ ಕರ್ಮ.

ಶ್ರೀ ಸಿ. ಭೈರೇಗೌಡ : ಮಳೆಯಾಗಿಲ್ಲವೆಂದು ನಿಮ್ಮ ವರದಿಯ ಪ್ರಕಾರ ನೀವೇ ಒಪ್ಪಿದ್ದೀರಿ. ತಾವೇ ಒಪ್ಪಿಕೊಂಡಿರುವುದನ್ನು ನಾನು ಹೇಳುವುದು.

ಛೇರ್ಮನ್ : ಭೈರೇಗೌಡರೇ, ಕೃಷಿ ಮಂತ್ರಿಗಳು ಏನು ಹೇಳುತ್ತಾರೆ ಎಂದು ಕೇಳೋಣ.

+ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಮಂತ್ರಿ) : ಈಗ ನಿಲುವಳಿ ಸೂಚನೆ ಮೂಲಕ ಹೆಚ್ಚಿಗೆ ಮಳೆಬಿದ್ದು ಮತ್ತು ಸಾರ್ವಜನಿಕ ಆಸ್ತಿಗೆ ಅಪಾರವಾದ ನಷ್ಟ ಉಂಟಾಗಿರುವುದರ ಬಗ್ಗೆ ವಿಷಯವನ್ನು ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ಈಗಾಗಲೇ ಕಂದಾಯ ಸಚಿವರು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ವಾಡಿಕೆಯಲ್ಲಿ ಎಷ್ಟು ಮಳೆ ಬರಬೇಕಿತ್ತು, ಅದು ಬರುವುದರಲ್ಲಿ ಎಷ್ಟು ಕುಂಠಿತವಾಗಿದೆ ಎನ್ನುವುದರ ಬಗ್ಗೆ ಅವರು ಈಗಾಗಲೇ ಉತ್ತರದಲ್ಲಿ ತಿಳಿಸಿದ್ದಾರೆ. ತಾವು ಮಾತನಾಡುವಂಥ ಸಂದರ್ಭದಲ್ಲಿ ಇವತ್ತು ಮುಂಗಾರಿನಲ್ಲಿ ಮತ್ತು ಹಿಂಗಾರಿನಲ್ಲಿ ಬೆಳೆ ಆಗಿಲ್ಲ ಎನ್ನತಕ್ಕಂಥದ್ದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ತಮ್ಮ ಮಾಹಿತಿಗೋಸ್ಕರ

ಈ ವಿಷಯವನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈಗ ಮುಂಗಾರಿನಲ್ಲಿ ವಾಡಿಕೆಯಂತೆ ಸಾಮಾನ್ಯವಾಗಿ ಸುಮಾರು 69 ಲಕ್ಷ ಹೆಕ್ಟೇರ್ ನಮ್ಮ ಗುರಿ ಇರತಕ್ಕದ್ದು. ಸರ್ವೆಸಾಮಾನ್ಯವಾಗಿ ಅಷ್ಟು ಇರುತ್ತದೆ. ಆದರೆ ಬಿತ್ತನೆಯಾಗಿರತಕ್ಕಂಥಾದ್ದು 65 ಲಕ್ಷ ಹೆಕ್ಟೇರ್. ಬೆಳೆ ಹಾನಿ ಬಗ್ಗೆ ತಾವೂ ಸೇರಿದಂತೆ ಅನೇಕ ಮಾನ್ಯಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಶೇಕಡಾ 25ರಷ್ಟು ಬೆಳೆ ಹಾನಿಯಾಗಿರತಕ್ಕಂಥಾದ್ದು 5.5 ಲಕ್ಷ ಎಕರೆಯಷ್ಟು. ಶೇಕಡಾ 25 ರಿಂದ 50 ರಷ್ಟು ಹಾನಿಯಾಗಿರತಕ್ಕದ್ದು 8 ಲಕ್ಷ ಎಕರೆ. ಶೇಕಡ 50 ರಿಂದ 75 ರಷ್ಟು ಹಾನಿಯಾಗಿರತಕ್ಕದ್ದು 5 ಲಕ್ಷ ಎಕರೆ. ಶೇಕಡ 75ರಿಂದ ನೂರರವರೆಗೆ ಹಾನಿಯಾಗಿರತಕ್ಕದ್ದು 2 ಲಕ್ಷ ಎಕರೆ. ಒಟ್ಟು 21 ಲಕ್ಷ ಹೆಕ್ಟೇರ್ ಬೆಳೆ ಇವತ್ತು ಹಾನಿಯಾಗಿದೆ. ಅದು ಎಷ್ಟು ಪರ್ಸೆಂಟ್? ಈಗಾಗಲೇ ಹಾರ್ವೆಸ್ಟಿಂಗ್ ಪ್ರಾರಂಭವಾಗಿದೆ. ಇದು ಪ್ರಾರಂಭವಾಗಿರಬೇಕಾದರೆ ನಿಖರವಾಗಿ ಎಷ್ಟು ಹಾನಿಯಾಗಿದೆ, ಯಾವ್ಯಾವ ಭಾಗದಲ್ಲಿ ಆಗಿದೆ ಎನ್ನತಕ್ಕಂಥ ಮಾಹಿತಿ ಕ್ರಾಪ್‌ಕಟಿಂಗ್ ಎಕ್ಸಪರಿಮೆಂಟ್ ಆದಮೇಲೆ ನಮಗೆ ಗೊತ್ತಾಗಬೇಕಾಗುತ್ತದೆ. ಪ್ರಸ್ತಾಪ ಮಾಡಿದ್ದರಿಂದ ಸೂಕ್ಷ್ಮವಾಗಿ ತಮಗೆ ಮಾಹಿತಿ ತಿಳಿಸುತ್ತಿದ್ದೇನೆ. ಚರ್ಚೆಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕೋಸ್ಕರ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂಗಾರು ಬೆಳೆ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೀರಿ. ಇದು ಬೆಳೆ ಗುರಿಯಿರತಕ್ಕದ್ದು ಸುಮಾರು 32 ಲಕ್ಷ ಹೆಕ್ಟೇರ್‌ಗಳು. ಆದರೆ ಇವತ್ತು ಬಿತ್ತನೆಯಾಗಿರತಕ್ಕಂಥಾದ್ದು ಕೇವಲ 11 ಲಕ್ಷ ಹೆಕ್ಟೇರ್ ಮಾತ್ರ. ಈಗ ಮಳೆ ಡ್ರೈಸ್ಪೆಲ್‌ನಿಂದ ಆಗಿದೆ. ಡ್ರೈಸ್ಪೆಲ್‌ನಿಂದಾಗಿ ಮತ್ತು ರೋಗದಿಂದಾಗಿ ಕೂಡ ಇವತ್ತು ಬೆಳೆ ಪ್ರೊಡಕ್ಷನ್‌ನಲ್ಲಿ ತೊಂದರೆಯಾಗಿದೆ. ಆದರೆ ಅದು ಎಷ್ಟು ಆಗಿದೆಯೆಂದು ಇವತ್ತು ನಿಖರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಹಾರ್ವೆಸ್ಟಿಂಗ್ ಪ್ರಾರಂಭವಾಗಿರತಕ್ಕಂಥ ಸಂದರ್ಭದಲ್ಲಿ ಮತ್ತು ಇವತ್ತು ಹಿಂಗಾರಿನ ಮಳೆ ಆಶಾದಾಯಕವಾಗಿದೆ. ಎಲ್ಲ ಕಡೆ ಕೂಡ ಮಳೆ ಬರತಕ್ಕಂಥ ವಾತಾವರಣ ಇದೆ. ಸೋಯಿಂಗ್ ಈಗ ಆಗಿದೆ. ಈಗ ಇನ್ನೂ ಪ್ರಾರಂಭ ಹಂತದಲ್ಲಿರಬೇಕಾದರೆ ಬೆಳೆ ಬಗ್ಗೆ ಏನಾಗುತ್ತದೆ, ಪ್ರೊಡಕ್ಷನ್ ಬಗ್ಗೆ ಏನು ಆಗುತ್ತದೆ ಎಂದು ನಿಖರವಾಗಿ ಈಗ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಎಂಟೈರ್ ಗವರ್ನಮೆಂಟ್ ಮಿಷನರಿ ಇದರಲ್ಲಿ ವಿಫಲವಾಗಿದೆ. ಸರಿಯಾದ ರೀತಿಯಲ್ಲಿ ಸರ್ವೆ ನಡೆಯಲಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಆಗಬಾರದ ಅನಾಹುತವಾಗಿದೆ. ಕೆರೆ ಕಟ್ಟೆಗಳು ಒಡೆದು ಹೋಗಿವೆ. ಬರ್ರೀ ಬೆಳೆ ಹಾನಿಯಲ್ಲ, ಬೇರೆ ಬೇರೆ ಹಾನಿಗಳು ಸಾಕಷ್ಟು ಆಗಿದೆ. ಮಾನ್ಯ ರೆವಿನ್ಯೂಮಂತ್ರಿಗಳು ಹೇಳುತ್ತಿದ್ದಾರೆ, ನೀವೂ ಹೇಳುತ್ತಿದ್ದೀರಿ. ನಿಮ್ಮ ಹತ್ತಿರ ಯಾವುದೇ ಒಂದು ನಿಖರವಾದ ಅಂಕಿ ಅಂಶ ಇಲ್ಲ. ಸರ್ಕಾರ ಇಷ್ಟು ದಿವಸ ನೋಡಬೇಕೇ? ರೈತರು ಕಣ್ಣೀರು ಒರೆಸತಕ್ಕ ಪರಿಸ್ಥಿತಿಯಲ್ಲಿ ನಿಮ್ಮ ಅಧಿಕಾರಿಗಳು ಧಾವಿಸಬೇಕಾಗಿದೆ. ಮಂತ್ರಿಗಳಿಗೆ ಸರಿಯಾದಂಥ ಬ್ಯಾಕ್‌ಫೀಡ್ ಅವರು ಮಾಡಲಿಲ್ಲ. ಅಧಿಕಾರಿಗಳು ಬೆಂಗಳೂರಿನಲ್ಲಿದ್ದಾರೆ, ನೀವು ಮಂತ್ರಿಮಂಡಲ ರಚನೆಯಲ್ಲಿದ್ದೀರೇ ಹೊರತು ರೈತರ ಸಹಾಯಕ್ಕೆ ಹೋಗಲಿಲ್ಲ. ಒಂದೆರಡು ದಿನ ಶಿವಮೊಗ್ಗದಲ್ಲಿ ಪ್ರವಾಸ ಮಾಡಿದ್ದೀರಿ. ಎಷ್ಟು ಬೆಳೆ ಹಾನಿಯಾಗಿದೆ? ನಾವು ಯಾರನ್ನು ಕೇಳಬೇಕು. ಕಳೆದ ವರ್ಷ ಕೊಟ್ಟಂಥ ಹಣವನ್ನೂ ಜಿಲ್ಲಾಧಿಕಾರಿಗಳು ಖರ್ಚು ಮಾಡಲಿಲ್ಲ. ಮನೆಗಳು ಬಿದ್ದುಹೋದವರಿಗೂ ಕೂಡ ಪರಿಹಾರ ಕೊಡಲಿಲ್ಲ. ಸರ್ಕಾರ ಕೊಟ್ಟರೂ ಕೂಡ ಅಧಿಕಾರಿಗಳು ಅಲ್ಲಿ ಕೊಡುತ್ತಾ ಇಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಯಾವ ಯಾವ ಭಾಗದಲ್ಲಿ ಯಾವಯಾವುದು ಹಾನಿಯಾಗಿದೆ ಎಂಬ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಅಧಿಕಾರಿಗಳ ಮೇಲೆ ನಿಮ್ಮ ಹಿಡಿತ ಸಾಕಾಗುತ್ತಾ ಇಲ್ಲ.ತಕ್ಷಣವೇ ಹಳ್ಳಿಗಳಿಗೆ ಹೋಗಿ ಸರ್ವೆ ಮಾಡಿಸಿ, ಅದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಕೆಲಸ ಮಾಡಿದರೆ ರೈತರಿಗೆ ಯಾವ ರೀತಿ ಪರಿಹಾರ ಸಿಗುತ್ತದೆ?

ಶ್ರೀ ಎಸ್. ಎಂ . ಕೃಷ್ಣ : ಕಳೆದ ವರ್ಷ ಅಧಿಕಾರಿಗಳ ಮೇಲೆ ನಮ್ಮ ಹತೋಟಿ ಇರಲಿಲ್ಲ ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವ್ಯವಸಾಯ ಸಚಿವರು ನೂರಕ್ಕೆ ನೂರರಷ್ಟು ಒಪ್ಪಿದ್ದಾರೆ, 5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ವಿಫಲವಾಗಿದೆ ಎನ್ನುವುದನ್ನು ತಮ್ಮ ಹೇಳಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. ವಿಫಲವಾಗಿರುವ ಕಡೆ ನೀವು ಕ್ರಾಪ್ ಕಟಿಂಗ್ ಎಕ್ಸಪೆರಿಮೆಂಟ್ ಹೇಗೆ ಮಾಡುತ್ತೀರಿ? ಇದು ಸಾಧ್ಯವಾಗುತ್ತದೆಯೇ? ನಾನು ಮೊದಲೇ ಕೇಳಿರತಕ್ಕ ಪ್ರಶ್ನೆ ಏನೆಂದರೆ ಈ ರೀತಿಯಾಗಿ ಬಿತ್ತನೆ ಆಗದೇ ಇರತಕ್ಕ ಪ್ರದೇಶ ಇದೆ. ಅಲ್ಲಿ ಕುಡಿಯುವ ನೀರಿಗೆ ತೊಂದರೆ, ದನಕರುಗಳಿಗೆ ಮೇವಿಲ್ಲ. ಜನಗಳ ಆಹಾರ ಪರಿಸ್ಥಿತಿ ಏನಾಗಿದೆ, ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ. ಮಾನ್ಯ ಕಂದಾಯ ಸಚಿವರ ಹೇಳಿಕೆಯಲ್ಲಿ ಅದರ ಪ್ರಸ್ತಾವವೇ ಇಲ್ಲ. ಇವತ್ತು ತಾವು ಮಾಹಿತಿ ಕೊಟ್ಟಿದ್ದೀರಿ. ಇದಕ್ಕೆ ಅವರಾದರೂ ಉತ್ತರ ಹೇಳಬಹುದು ಅಥವಾ ಮಾನ್ಯ ಮುಖ್ಯಮಂತ್ರಿಗಳಾದರೂ ಹೇಳಬಹುದು. ತಮ್ಮ ಪ್ರಕಾರವೇ 5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿಲ್ಲ. ಅಲ್ಲಿನ ರೈತರ ಪರಿಸ್ಥಿತಿ ಏನಾಗಬೇಕು? ಆ ಪ್ರದೇಶದ ಪರಿಸ್ಥಿತಿ ಏನಾಗಬೇಕು? ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ. ನಿಮಗೆ ಅಧಿಕಾರಿಗಳ ಮೇಲೆ ಹಿಡಿತ ಇದೆಯೋ ಇಲ್ಲವೋ ಆ ಪ್ರಶ್ನೆ ಬೇರೆ. ಇವತ್ತು ಜನ ಅಲ್ಲಿ ತೊಂದರೆಗೆ ಈಡಾಗಿದ್ದಾರೆ. ಇವರ ರಕ್ಷಣೆಗೆ ಬರತಕ್ಕಂಥಾದ್ದು ಸರ್ಕಾರದ ಕರ್ತವ್ಯ. ನೀವು ಯಾವರೀತಿಯಾದ ಕ್ರಮ ತೆಗೆದುಕೊಂಡಿದ್ದೀರಿ, ಅದು ಇವತ್ತಿನ ದಿವಸ ಮುಖ್ಯವಾಗಿರತಕ್ಕಂತಾದ್ದು.

ಶ್ರೀ ಟಿ. ಬಿ. ಜಯಚಂದ್ರ : ಶೇಕಡ 75 ರಿಂದ 100 ರಷ್ಟು ಬೆಳೆ ಹಾನಿಯಾಗಿರತಕ್ಕಂತಾದ್ದು ಅದು ಯಾವ ರೀತಿಯಾಗಿ ಮಳೆಯಿಂದ ಆಗಿರಬಹುದು ಅಥವಾ ರೋಗದಿಂದ ಆಗಿರಬಹುದು ಅದು ಕೇವಲ ಎರಡು ಲಕ್ಷ ಎಕರೆ ಇರತಕ್ಕಂತಾದ್ದು. ನಮ್ಮ ಗುರಿ ಇದ್ದುದು 69 ಲಕ್ಷ ಹೆಕ್ಟೇರ್‌ನಲ್ಲಿ, ಈ 69 ಲಕ್ಷ ಹೆಕ್ಟೇರ್‌ನಲ್ಲೂ ಬಿತ್ತನೆಯಾಗಿದೆ. ಪ್ರಾರಂಭದಲ್ಲಿ ಮಳೆ ಚೆನ್ನಾಗಿಯೇ ಇತ್ತು, ಬಿತ್ತನೆ ಎಲ್ಲಾ ಕಡೆಯೂ ಆಗಿದೆ. ಆದರೆ, ಕೆಲವು ಹಂತದಲ್ಲಿ ಮಳೆಯಿಂದ ತೊಂದರೆಯಾಗಿ, ಒಟ್ಟಾರೆ 21 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ ಎಂದು ಉತ್ತರದಲ್ಲಿ ಕೊಡುತ್ತಿದ್ದೇವೆ. ಆದರೆ, ಎಷ್ಟು ಹಾನಿಯಾಗಿದೆ, ಎಷ್ಟು ಪರ್ಸೆಂಟ್ ಎಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಒಕ್ಕಣೆ ಪ್ರಾರಂಭವಾಗಿರುವುದು ಈಗ. ಇದು ಮುಗಿಯುವ ಹಂತದಲ್ಲಿರಬೇಕಾದರೆ, 11-12ನೇ ತಾರೀಖು ಸದನ ಸೇರುವಂಥ ಕಾಲದಲ್ಲಿ ಸವಿಸ್ತಾರವಾಗಿ ಹೇಳಬಹುದು. ತಾವು ಹೇಳಿದಂತೆ 5 ಲಕ್ಷ ಹೆಕ್ಟೇರಿನಲ್ಲಿ ಬೆಳೆ ಹಾನಿಯಾಗಿದೆ ಮತ್ತು ಕೆಲವು ಕಡೆ ಬೆಳೆಯನ್ನೇ ಇಡಲಿಲ್ಲವೆಂಬ

ಮಾತನ್ನು ಹೇಳಿದಿರಿ. ಅದನ್ನೂ ಕೂಡ ಪರಿಶೀಲನೆ ಮಾಡಿ 11ನೇ ತಾರೀಖು ವಿವರವಾದ ಹೇಳಿಕೆಯನ್ನೂ ಕೂಡ ನಾನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮತ್ತು ಕೃಷಿ ಸಚಿವರು ಉತ್ತರ ಕೊಟ್ಟರು. ಆದರೆ, ಅತಿವೃಷ್ಟಿಯಾದ ಸಂದರ್ಭದಲ್ಲಿ ತೀವ್ರಗತಿಯಿಂದ ಏನು ಕ್ರಮ ಕೈಗೊಂಡರು, ಯಾವ ಯಾವ ಜಿಲ್ಲೆಯಿಂದ ಜಿಲ್ಲಾಧಿಕಾರಿಗಳ ವರದಿ ಬಂದಿದೆ, ಯಾವುದನ್ನೂ ಸ್ಪಷ್ಟವಾಗಿ ಹೇಳಲಿಲ್ಲ. ಕೆಲವು ಜಿಲ್ಲೆಗಳಿಂದ ಇನ್ನೂ ವರದಿ ಬಂದಿಲ್ಲವೆಂದು ಹೇಳಿದರು. ಇದರಿಂದ, ಕೆಲಸ ಮಾಡುವಂಥ ಸರ್ಕಾರ ಇದೆಯೋ ಇಲ್ಲವೇ ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಇದೀಗ ಮೈಸೂರು ಜಿಲ್ಲೆಯ ವರದಿ ಬಂದಿಲ್ಲವೆಂದು ಹೇಳಿದರು. ಅಲ್ಲಿನ ಶಾಸಕರು ಹೇಳಿದರು, ಜಿಲ್ಲಾಧಿಕಾರಿಗಳು 27-10-99ಕ್ಕೆ ವರದಿಯನ್ನು ಕಳುಹಿಸಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ಲುಕ್ಸಾನಾಗಿದೆ ಎಂಬ ವಿವರವಾದ ವರದಿಯನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ. 587 ಲಕ್ಷ ರೂಪಾಯಿ ಲುಕ್ಸಾನಾಗಿದೆ. ತಕ್ಷಣ 5 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳು ವರದಿ ಕೊಟ್ಟಿದ್ದಾರೆ. ಮಾನ್ಯ ಕಂದಾಯ ಸಚಿವರು ಮೈಸೂರು ಜಿಲ್ಲೆಯಿಂದ ಇನ್ನೂ ವರದಿ ತರಿಸುತ್ತೇವೆಂದು ಹೇಳುತ್ತಾರೆ. ಪ್ರತಿ ಜಿಲ್ಲೆಯ ಇರತಕ್ಕ ವಿವರಗಳನ್ನು ಅವರು ಸರಿಯಾಗಿ ಹೇಳಲಿಲ್ಲ. ಇವತ್ತು ಸರ್ಕಾರ ಸರಿಯಾಗಿ ಕೆಲಸ ಮಾಡುತ್ತದೋ ಇಲ್ಲವೋ, ರೈತರ ಪರವಾಗಿ, ರೈತರ ದು:ಖವನ್ನು ಅಳಿಸುವುದಕ್ಕೆ ಅವರು ಏನು ಮಾಡುತ್ತಿದ್ದಾರೆ, ಪರಿಹಾರ ಧನ ಕೊಡುವಂಥ ಕಾರ್ಯವನ್ನು ನಡೆಸುತ್ತಾರೋ ಇಲ್ಲವೋ ಅಥವಾ ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದರು. ಇದು ಯಾವುದೂ ಅವರ ಉತ್ತರದಲ್ಲಿ ಸ್ಪಷ್ಟವಾಗಿ ಇಲ್ಲ. ಇವತ್ತು ಕೇಂದ್ರ ಸರ್ಕಾರಕ್ಕೆ ಯಾವುದೇ ಒಂದು ಮನವಿಯನ್ನು ಇದುವರೆಗೂ ಕೊಟ್ಟಿಲ್ಲ. ಇವತ್ತು ಇಷ್ಟು ಲುಕ್ಸಾನಾಗಿದೆ, ಅತಿವೃಷ್ಟಿಯಿಂದ ಇಷ್ಟು ಹಾನಿಯಾಗಿದೆ. ನೂರಾರು ಕೋಟಿ ಪತ್ರಿಕೆಯಲ್ಲಿ ಬರುತ್ತಾ ಇದೆ. ಜಿಲ್ಲಾಧಿಕಾರಿಗಳ ಪೇಪರ್ ಸ್ಟೇಟ್‌ಮೆಂಟ್ ಬರುತ್ತಾ ಇದೆ. ಇವತ್ತು ನೂರಾರು ಕೋಟಿ ರೂಪಾಯಿಗಳ ಬೆಳೆ ನಾಶವಾಗುವ ಸಂದರ್ಭದಲ್ಲಿ ಇವತ್ತು ಸರ್ಕಾರ ಆ ಮಂತ್ರಿಮಂಡಲ ರಚನೆ ಮತ್ತು ಇನ್ನಿತರ ಒತ್ತಡಗಳಿಂದ ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ರೈತರ ಕಣ್ಣೀರನ್ನು ಒರೆಸುವಂಥ ಕೆಲಸ ಮಾಡುತ್ತಾ ಇಲ್ಲ. ಅವರ ಬೆಳೆ ನಾಶವಾಗಿದ್ದಕ್ಕೆ, ಅವರು ಮನೆಗಳನ್ನು ಕಳೆದುಕೊಂಡಿದ್ದಕ್ಕೆ ಸರಿಯಾದ ಪರಿಹಾರಧನವನ್ನು ಕೊಡುವಂಥ ಕೆಲಸ ಮಾಡುತ್ತಾ ಇಲ್ಲ. ಅದಕ್ಕಾಗಿ ಇವತ್ತು ಸರ್ಕಾರದ ಈ ರೈತ ವಿರೋಧಿ ನೀತಿಯನ್ನು ಮತ್ತು ಈ ಮೆದು ನೀತಿಯನ್ನು ನಾವು ಖಂಡಿಸುತ್ತೇವೆ. ಈ ಬಗ್ಗೆ ಯಾವುದೇ ಒಂದು ಕ್ರಮವನ್ನು ಕೈಗೊಳ್ಳದಿರುವುದಕ್ಕೆ ಮತ್ತು ಈ ರೈತ ವಿರೋಧಿ ನೀತಿಯನ್ನು ಖಂಡಿಸಿ, ಇವತ್ತು ಬಿ ಜೆ. ಪಿ ಶಾಸಕರು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಬಿ ಜೆ. ಪಿ ಶಾಸಕರೆಲ್ಲರೂ ಸಭಾತ್ಯಾಗ ಮಾಡಿದರು.)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊದಲನೇ ದಿವಸವೇ ನೀವು ನಾವು ಸಭಾತ್ಯಾಗ ಮಾಡುವುದಿಲ್ಲ, ಧರಣಿ ಮಾಡುವುದಿಲ್ಲವೆಂದು ಹೇಳಿದಿರಿ...

ಶ್ರೀ ಸಿ. ಭೈರೇಗೌಡ : ಈ ವಿಚಾರದಲ್ಲಿ ಮಾನ್ಯ ವ್ಯವಸಾಯ ಸಚಿವರು ಒಪ್ಪಿದ್ದಾರೆ.

ಸುಮಾರು 2 ಲಕ್ಷ ಹೆಕ್ಟೇರಿನಲ್ಲಿ ಶೇಕಡ 75 ರಿಂದ 100 ರಷ್ಟು ಬೆಳೆ ವಿಫಲವಾಗಿದೆ. ಅದೇಕೋ ಗೊತ್ತಿಲ್ಲ. ಮಾನ್ಯ ಕಂದಾಯ ಸಚಿವರು ಇಷ್ಟೊಂದು ಅಸಹಾಯಕರಾಗಿ ಕುಳಿತಿದ್ದಾರೆ. ನಿಮಗಿರತಕ್ಕ ತೊಂದರೆ ಏನು? ನಿಮಗೆ ಬೇರೆ ಖಾತೆ ಬೇಕೋ ಅಥವಾ ನಿಮ್ಮ ಚಿಂತನೆ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಎಲ್ಲಾ ರಿಪೋರ್ಟ್ ತಾವು ಇದ್ದಾಗ ಬಂದಿದ್ದು. ಅದರ ಮೇಲೆ ಸ್ವಲ್ಪ ಇಂಪ್ರೂವ್‌ಮೆಂಟ್ ಮಾಡಿ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಸರ್ಕಾರ ಈ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಸರ್ಕಾರ ಒಪ್ಪಿದರೂ ಕೂಡ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ಮಾನ್ಯ ಕಂದಾಯ ಸಚಿವರು ಹೇಳುವುದಕ್ಕಾಗುತ್ತಾ ಇಲ್ಲ. ನಾವು ಈ ಸದನದಲ್ಲಿ ಧರಣಿ ಮಾಡುವುದು ಅಥವಾ ಸಭಾತ್ಯಾಗ ಮಾಡುವುದು ಬಹಳ ಅಪರೂಪ. ಇದು ಬಲಯುತವಾದ ಮತ್ತು ಅಂತಿಮ ಅಸ್ತ್ರ. ಈ ಸ್ಟಾಂಗರ್ ವೆಪನ್ಸ್‌ನ್ನು ನಾವು ಉಪಯೋಗಿಸುವುದಕ್ಕೆ ತಯಾರಿಲ್ಲ. ಈ ವಿಚಾರದಲ್ಲಿ ತೀವ್ರವಾದ ಪ್ರತಿಭಟನೆಯನ್ನು ಸರ್ಕಾರಕ್ಕೆ ಸೂಚಿಸುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಖರ್ಗೆಯವರು ಹೇಳಿದಹಾಗೆ, ಇಲ್ಲಾದ್ದಾಗ ಏನು ಮಾಡುತ್ತಿದ್ದರೋ, ಅದನ್ನೇ ಈಗ ಅವರೂ ಮಾಡುತ್ತಿದ್ದಾರೆ. ಆ ಮಾತು ಬೇರೆ. ಮಾನ್ಯ ಕಂದಾಯ ಸಚಿವರು, ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ತಮ್ಮ ಹಣಕಾಸಿನ ಲಭ್ಯತೆಯನ್ನು ಹೇಳಿ. ಏಕೆಂದರೆ, ಮಾನ್ಯ ಹೆಚ್. ಕೆ. ಪಾಟೀಲರೂ ಇಲ್ಲಿದ್ದಾರೆ. ಏಕೆಂದರೆ, ಅವರು ಹಿಂದೆ ರೈತ ವಿರೋಧಿ, ಹಾಗೆ, ಹೀಗೆ ಎಂದು ವಿಧಾನ ಪರಿಷತ್ತಿನಲ್ಲಿ ಮಾತನಾಡಿದ್ದರು. ಇವತ್ತು ಹಣಕಾಸಿನ ವ್ಯವಸ್ಥೆಯನ್ನು ಹೇಳಿ. ಸುಮ್ಮನೆ ನಾವು ಚರ್ಚೆ ಮಾಡುವುದು ಬೇಡ. ನಿಮ್ಮ ಹತ್ತಿರ ದುಡ್ಡು ಎಷ್ಟಿದೆ ಅದನ್ನು ಹೇಳಿ. ರೈತರಿಗೆ ಎಷ್ಟು ಹಾನಿಯಾಗಿದೆ, ಎಷ್ಟು ಕೊಡುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಉತ್ತರ ಹೇಳಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಕಂದಾಯ ಸಚಿವರ ಹೇಳಿಕೆ ಪ್ರಕಾರ ಮಂಡ್ಯ ಜಿಲ್ಲೆ ಒಂದರಲ್ಲೇ ಸುಮಾರು 18 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ವರದಿ ಬಂದಿದೆ. ಅದರಲ್ಲಿ ಸಾರ್ವಜನಿಕ ಆಸ್ತಿ ಪಾಸ್ತಿಗೆ 5-6 ಕೋಟಿಯಾಗಿದೆ, ಖಾಸಗಿ ಆಸ್ತಿಪಾಸ್ತಿಗೆ ಸುಮಾರು 10-12 ಕೋಟಿಯಾಗಿದೆ. ಆದರೆ, ಇದುವರೆಗೆ ಒಂದು ರೂಪಾಯಿಗಳನ್ನೂ ಮಂಡ್ಯ ಜಿಲ್ಲೆಗೆ ಕೊಟ್ಟಿಲ್ಲ. ಅದು ಮುಖ್ಯಮಂತ್ರಿಗಳ ಜಿಲ್ಲೆಯ. ಎಷ್ಟೋ ಕೆರೆಗಳು ಒಡೆದು, ನೀರೆಲ್ಲಾ ಹೋಗುತ್ತಾ ಇದೆ. ಕೇಂದ್ರ ಸರ್ಕಾರಕ್ಕೆ ನನ್ನ ದೂರು ಮತ್ತು ಇವರ ಮೇಲೆ ಆಪಾದನೆ ಏನೆಂದರೆ, ಈ ಸರ್ಕಾರ ಬಂದು ಸುಮಾರು 20 ದಿನಗಳಾಯಿತು. ಈ 20 ದಿನಗಳಿಂದ ತಾವು ಯಾವುದೇ ಒಂದು ಪ್ರಕ್ರಿಯೆ ಮಾಡಿಲ್ಲ. ಸರಿಯಾದಂಥ ಮಾಹಿತಿ ಸಂಗ್ರಹಣೆ ಮಾಡಿಲ್ಲ. ಎಷ್ಟೆಷ್ಟು ಲಾಸ್ ಆಗಿದೆ ಎಂಬುದರ ಬಗ್ಗೆ ನಿಖರವಾದ ಮಾಹಿತಿ ತಮ್ಮಲ್ಲಿ ಇಲ್ಲ. ಎಷ್ಟು ಮನೆಗಳು ಹಾಳಾಗಿವೆ ಎಂಬುದರ ಬಗ್ಗೆ ಮಾಹಿತಿ ನಿಮ್ಮಲ್ಲಿ ಇಲ್ಲ. ಎಷ್ಟು ಕೆರೆಗಳು ಒಡೆದು ಹೋಗಿವೆ ಎಂಬ ಮಾಹಿತಿ ಇಲ್ಲ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಹಾಳಾಗಿವೆ ಎಂಬ ಬಗ್ಗೆ ತಮ್ಮ ಹತ್ತಿರ ಯಾವುದೇ ಮಾಹಿತಿ ಇಲ್ಲ. ಎಲ್ಲಾ ಅಂಕಿ ಅಂಶಗಳನ್ನೂ ಕ್ರೋಢೀಕರಿಸಬೇಕು. ಇವತ್ತು ಸರ್ಕಾರದಲ್ಲಿ 48 ಕೋಟಿ ರೂಪಾಯಿ ಮೀಸಲಾಗಿದೆ. ಅದರಲ್ಲಿ ಕೇವಲ 17 ಕೋಟಿ ರೂಪಾಯಿಗಳನ್ನು ಮಾತ್ರ

ಬಿಡುಗಡೆ ಮಾಡಿದ್ದೀರಿ. ಉಳಿದಿರತಕ್ಕ ಹಣವನ್ನೂ ರಿಲೀಸ್ ಮಾಡಬೇಕಾಗಿದೆ. ಇದರ ಜೊತೆಗೆ, ಇದುವರೆಗೂ ತಾವು ಕೇಂದ್ರ ಸರ್ಕಾರಕ್ಕೆ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ. ಮತ್ತು ಕೇಂದ್ರದ ತಂಡವನ್ನು ಇಲ್ಲಿಗೆ ಕರೆಸಿ, ಪರಿಶೀಲನೆ ಮಾಡಿಸತಕ್ಕ ಕೆಲಸವನ್ನೂ ಮಾಡಿಲ್ಲ. ಕಳೆದ 20 ದಿನಗಳಲ್ಲಿ ಈ ವಿಚಾರದಲ್ಲಿ ಸರ್ಕಾರ ತಲೆಕೆಡಿಸಿಕೊಂಡಿಲ್ಲ. ಇವರು ಅಧಿಕಾರಕ್ಕೆ ಬಂದತಕ್ಷಣ ಖಾತೆ ಹಂಚಿಕೊಳ್ಳತಕ್ಕಂಥಾದ್ದು, ಯಾವ ಯಾವ ರೂಮುಗಳು ಬೇಕು, ಯಾವ ಯಾವ ಕಾರುಗಳು ಬೇಕು, ಯಾವ ಯಾವ ಮನೆಗಳು ಬೇಕೆಂಬುದರ ಬಗ್ಗೆ ತಲೆಕೆಡಿಸಿಕೊಂಡರೇ ಹೊರತು ಈ ಅತಿವೃಷ್ಟಿಯಿಂದ ಸಾರ್ವಜನಿಕರಿಗೆ ಆಗತಕ್ಕ ತೊಂದರೆಗಳ ಬಗ್ಗೆ ಈ ಸರ್ಕಾರ ಅರ್ಥಮಾಡಿಕೊಂಡಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಸರ್ಕಾರ ಇನ್ನಾದರೂ ಇದರ ಬಗ್ಗೆ ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಹಣ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಬಗ್ಗೆ ನಾನು ಕೇಳಿದ್ದೆ. ಈ ರಾಜ್ಯದಲ್ಲಿ ಕೆರೆಕಟ್ಟೆಗಳು ಎಷ್ಟು ಒಡೆದಿವೆ, ಅದಕ್ಕೆ ಎಷ್ಟು ಪರಿಹಾರಧನವನ್ನು ಬಿಡುಗಡೆ ಮಾಡಿದ್ದಾರೆ. ನೀರಾವರಿ ಇಲಾಖೆಯಿಂದ ಎಷ್ಟು ರಿಲೀಸ್ ಮಾಡಿದ್ದಾರೆ. ಈ ಅಂಕಿ ಅಂಶಗಳನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಜಯಪ್ರಕಾಶ ಹೆಗ್ಡೆ : ಇದುವರೆಗೆ ಸರ್ಕಾರ ಯಾವ ಯಾವ ಜಿಲ್ಲೆಗೆ ಎಷ್ಟು ಹಣವನ್ನು ಕಳುಹಿಸಿದ್ದಾರೆ. ಇದು ಮುಖ್ಯವಾಗಿ ಬೇಕು. ಏಕೆಂದರೆ, ಇಲ್ಲಿಂದ ನೀವು ಹಣವನ್ನು ಕಳುಹಿಸದೇ, ನಾವು ಅಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ ಗಲಾಟೆಯನ್ನು ಮಾಡುವಂತಾದ್ದು ಸರಿಯಲ್ಲ. ಕರಾವಳಿ ಜಿಲ್ಲೆಗಳ ಸಮಸ್ಯೆಯನ್ನೂ ತಿಳಿದು, ಉಡುಪಿ, ಮಂಗಳೂರು ಮತ್ತು ಉತ್ತರ ಕನ್ನಡದಲ್ಲಿ ಮಳೆಗಾಲಕ್ಕೆ ಒಂದು ತಿಂಗಳು ಮುಂಚೆಯೇ ಮಳೆ ಪ್ರಾರಂಭವಾಯಿತು. ಆಮೇಲೆ ಇವತ್ತಿಗೂ ಮಳೆ ನಿಂತಿಲ್ಲ. ಬಿತ್ತನೆಯನ್ನು ಸರಿಯಾದ ಸಮಯದಲ್ಲಿ ಮಾಡಲಿಕ್ಕಾಗಲಿಲ್ಲ. ಮತ್ತು ಈಗ ಕಟಾವು ಕೂಡ ಮಾಡಲಿಕ್ಕಾಗುತ್ತಾ ಇಲ್ಲ. ಈಗ ಸರ್ಕಾರದಿಂದ ಕೊಡುವಂಥ ಪರಿಹಾರ ಏನಿದೆ, ಒಂದು ಹೆಕ್ಟೇರಿಗೆ 500 ರೂಪಾಯಿ ಕೊಡುತ್ತಾರೆ, ಅದು ಖಂಡಿತವಾಗಿಯೂ ಸಾಕಾಗುವುದಿಲ್ಲ. ಸಮುದ್ರ ಕೊರೆತದಿಂದ ಕೆಲವು ತೆಂಗಿನ ಮರಗಳು ಬಿದ್ದಿವೆ. ಒಂದು ಮರಕ್ಕೆ ನೂರು ರೂಪಾಯಿ ಕೊಡುವಂತಾದ್ದು ಇದೆ. ಅದನ್ನು ಮರು ಪರಿಶೀಲನೆ ಮಾಡಿ, ಇದನ್ನು ಹೆಚ್ಚು ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

+ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು): ನಾನು 28ನೇ ತಾರೀಖು ಅಧ್ಯಕ್ಷರ ಅನುಮತಿ ಮೇರೆಗೆ ಹಾಗೆಯೇ ಸಭಾನಾಯಕರ ಮಾಹಿತಿಗೋಸ್ಕರ ಮೈನರ್ ಇರಿಗೇಷನ್‌ಗೆ ಸಂಬಂಧಿಸಿದ ಸೆಕ್ರೆಟರಿಗಳ ಜೊತೆಯಲ್ಲಿ ಹಾಗೆಯೇ ಚೀಫ್ ಇಂಜಿನಿಯರ್ಸ್, ಸೂಪರಿಂಟೆಂಡೆಂಟ್ ಇಂಜಿನಿಯರ್ಸ್ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ರಾಜ್ಯ ಎಲ್ಲಾ ಕಡೆಯಿಂದ ಕರೆಸಿ, ತುರ್ತಾಗಿ ಸಭೆಯನ್ನು ಮಾಡಿದ್ದೇವೆ. ಸುಮಾರು 3 ಗಂಟೆಗಳ ಕಾಲ ಇದರ ಮೇಲೆ ಚರ್ಚೆಯನ್ನು ಮಾಡಿದ್ದೇವೆ. ಎಲ್ಲೆಲ್ಲಿ ಬ್ರೀಚ್ ಆಗಿರತಕ್ಕ ಕೆರೆಕಟ್ಟೆಗಳು ಇರಬಹುದು. ಅಥವಾ ಸಣ್ಣಪುಟ್ಟ ಸಮಸ್ಯೆಗಳ ವಿಚಾರದಲ್ಲಿ ನನಗೆ ಮಾಹಿತಿಗಳು ಬಂದಂತೆ

ಜಿಲ್ಲಾಪರಿಷತ್ತುಗಳಿಗೆ ಸಂಬಂಧಪಟ್ಟಿದ್ದೂ ಇರಬಹುದು. ಅವುಗಳನ್ನೆಲ್ಲಾ ತತ್‌ಕ್ಷಣ ಕಳುಹಿಸಿ ಕೊಡಬೇಕೆಂದು ಈಗಾಗಲೇ ಆದೇಶ ನೀಡಲಾಗಿದೆ. ಅದರಲ್ಲಿ ಕೆಲವು ಕಾನೂನು ತೊಡಕುಗಳು ಕೂಡ ಇವೆ. ಅಂದರೆ, ಈಗ ಬ್ರೀಜ್ ಆಗಿರತಕ್ಕ ಸಂದರ್ಭದಲ್ಲಿ ತತ್‌ಕ್ಷಣ ಹೋಗಿ ಅವರು ಕೆಲಸ ಮಾಡುವುದಕ್ಕೆ ಕೆಲವು ಕಾನೂನು ಅಂದರೆ, ಅವರ ಮಿತಿಯಲ್ಲಿ ಬರತಕ್ಕ ಅಂದರೆ ಒಂದು ಲಕ್ಷದ ಕೆಳಗಡೆ ಇರತಕ್ಕ ಕೆಲಸಗಳನ್ನು ಮಾತ್ರ ಅವರು ತಕ್ಷಣ ತೆಗೆದುಕೊಳ್ಳಬಹುದು. ಒಂದು ಲಕ್ಷದ ಮೇಲಿರುವುದನ್ನು ತಕ್ಷಣ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಕೆಲಸಗಳ ಬಗ್ಗೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಅಥವಾ ಚೀಫ್ ಇಂಜಿನಿಯರ್‌ವರೆಗೆ ಹೋಗಬೇಕಾಗುತ್ತದೆ. ಈ ತರಹ ಸಮಸ್ಯೆಗಳು ಇರುವುದರಿಂದ, ಇದನ್ನೂ ಪರಿಶೀಲನೆ ಮಾಡಬೇಕೆಂದು ಹೇಳಿದೆ. ಹಣವನ್ನು ಬಿಡುಗಡೆ ಮಾಡತಕ್ಕ ವಿಚಾರ ಇನ್ನೂ ಕ್ಲಿಯರ್ ಆಗಿ ತಿಳಿಯದು. ರಿವರಗಳನ್ನು ತಕ್ಷಣ ತರಿಸಿಕೊಂಡು ನಾಳೆ ತಮಗೆ ಸಲ್ಲಿಸುತ್ತೇನೆ. ಸಣ್ಣ ನೀರಾವರಿ ಇಲಾಖೆಗೆ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಲಾಗಿದೆ ಎಂದು ನಮ್ಮ ರೆವಿನ್ಯೂ ಸಚಿವರು ಹೇಳುತ್ತಿದ್ದಾರೆ. ನಾನು ಇದರ ಬಗ್ಗೆ ಸೂಕ್ತವಾದ ಮಾಹಿತಿಯನ್ನು ತಕ್ಷಣ ತರಿಸಿಕೊಂಡು ತಮಗೆ ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಅಧ್ಯಕ್ಷರೇ, ನಮ್ಮ ಮುಖ್ಯವಾದ ಉದ್ದೇಶವಿರತಕ್ಕಂತಾದ್ದು, ಈ ನಿಲುವಳಿ ಸೂಚನೆಯನ್ನು ನಾವು ನಾಲ್ಕು ಜನ ಕಳುಹಿಸಿರತಕ್ಕ ಉದ್ದೇಶ, ರಾಜ್ಯ ಸರ್ಕಾರದವರು ಇದರ ಬಗ್ಗೆ ಎಚ್ಚರಗೊಂಡು, ಈ ಗವರ್ನಮೆಂಟ್ ಮಿಷನರಿ ಏನಿದೆ, ಅದನ್ನು ಅಲರ್ಟ್ ಮಾಡತಕ್ಕಂಥಾದ್ದು ಬಹಳ ಮುಖ್ಯವಾಗಿರತಕ್ಕ ವಿಚಾರ. ಮಾನ್ಯ ಕಂದಾಯ ಸಚಿವರು ಓದತಕ್ಕಂಥಾದ್ದು, ಅದು ಒಂದು ಭಾಗ. ಮಾಹಿತಿಯನ್ನು ತರಿಸಿಕೊಳ್ಳತಕ್ಕಂಥಾದ್ದು ಮತ್ತೊಂದು ಭಾಗ. ಜಿಲ್ಲಾಧಿಕಾರಿಗಳು ಮತ್ತು ಕೆಳಮಟ್ಟದ ಅಧಿಕಾರಿಗಳು ಯಾರಿದ್ದಾರೆ, ಮತ್ತು ಖಾಯಂ ಆಗಿ ಇದನ್ನು ಮಾನಿಟರ್ ಮಾಡಲಿಕ್ಕೆ ವಿಧಾನಸೌಧದಲ್ಲಿ ಒಂದು ಸೆಲ್‌ನ್ನು ಇಟ್ಟುಕೊಂಡಿದ್ದೇವೆ. ಒರಿಸ್ಸಾದಲ್ಲಿ, ಆಂಧ್ರಪ್ರದೇಶದಲ್ಲಿ, ವೆಸ್ಟ್ ಬೆಂಗಾಲ್‌ನಲ್ಲಿ ಚಂಡಮಾರುತ ಬರುತ್ತದೆಂದು ಹವಾಮಾನ ಇಲಾಖೆಯವರು ಹೇಳಿದ ತಕ್ಷಣವೇ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡು 20 ಸಾವಿರ, 30 ಸಾವಿರ ಜನರನ್ನು ಸಮುದ್ರ ತೀರದಿಂದ 20 ಕಿಲೋಮೀಟರ್, 15 ಕಿಲೋಮೀಟರ್ ಹೊರಗಡೆ ತೆಗೆದುಕೊಂಡು ಹೋಗಿರತಕ್ಕಂಥಾದ್ದು ನಮ್ಮ ಗಮನದಲ್ಲಿದೆ. ಆ ರೀತಿಯ ಒಂದು ರೆಸ್ಪಾನ್ಸ್ ಗವರ್ನಮೆಂಟ್ ಮಿಷನರಿಯಿಂದ ಆಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಮಾಡಿರತಕ್ಕಂಥಾದ್ದು. ಆಡಳಿತ ನಡೆಸಿರತಕ್ಕ ನಮಗೆ ಸರ್ಕಾರದ ಇತಿಮಿತಿಗಳು ಅರ್ಥವಾಗುತ್ತವೆ. ಹೆಚ್. ಕೆ. ಪಾಟೀಲರು ಆಗ ಏನು ಮಾತನಾಡುತ್ತಾ ಇದ್ದರು, ಅದನ್ನೆಲ್ಲಾ ಈಗ ಮಾಡುವುದಕ್ಕಾಗುವುದಿಲ್ಲವೆಂದು, ಅವರ ಶಬ್ದಗಳನ್ನು ಅವರೇ ನುಂಗಬೇಕಾಗುತ್ತದೆ. ಏಕೆಂದರೆ, ಆಡಳಿತ ನಡೆಸುವುದಕ್ಕೂ ವಿರೋಧಪಕ್ಷದಲ್ಲಿ ಕೆಲಸ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ ಎಂದು ನಮಗೆ ಅರಿವು ಇರುವುದರಿಂದ ಮತ್ತು ಅದರ ಜೊತೆಗೆ ಸರ್ಕಾರದ ಹಣಕಾಸಿನ ಇತಿಮಿತಿಗಳೂ ಸಹಿತ ಅರ್ಥವಾಗುತ್ತದೆ. ಯಾವುದಕ್ಕೋ 3,300 ಕೋಟಿ ರೂಪಾಯಿ ಕೊಡುತ್ತೇವೆ, ಇದಕ್ಕೆ ಕೊಡುತ್ತೇವೆ ಎಂಬುದಲ್ಲ. ಈ 3,300 ಕೋಟಿ ರೂಪಾಯಿ ಅದಕ್ಕೆ ಕೊಡುವುದರ ಬದಲಾಗಿ ಇಲ್ಲಿ ಯಾವ ರೈತರ ಮನೆಗಳು ಬಿದ್ದುಹೋಗಿವೆ, ಕೆರೆಗಳು ಒಡೆದುಹೋಗಿವೆ, ಅವರಿಗೆ ತಕ್ಷಣ ನೀವು ಪರಿಹಾರವನ್ನು ಕೊಡುವ ಕೆಲಸವನ್ನು ಮಾಡದೇ 3,300 ಕೋಟಿ ಕೊಡುತ್ತೇವೆಂದು ಹೇಳಿದರೆ

ಅದಕ್ಕೆ ಅರ್ಥ ಏನು? ಇದು ಇವತ್ತಿರತಕ್ಕಂತಹ ಒಂದು ಪ್ರಶ್ನೆ. ಸಭಾತ್ಯಾಗ ಮಾಡತಕ್ಕಂಥಾದ್ದು, ಪ್ರತಿಭಟನೆ ಮಾಡತಕ್ಕಂಥಾದ್ದು ಒಂದು ಭಾಗ. ಆದರೆ, ಸರ್ಕಾರದ ಕಿವಿಯನ್ನು ಹಿಂಡಿ, ಬಾಯಿಯನ್ನು ಬಿಡಿಸಿ ನಿಮ್ಮ ಕಣ್ಣನ್ನು ತೆರೆಸಿ, ನಿಮ್ಮ ಹೃದಯದಲ್ಲಿ ಆ ನೊಂದಿರತಕ್ಕಂಥ ಜನಗಳ ಕಷ್ಟವನ್ನು ಹಾಕಬೇಕೆಂಬ ಉದ್ದೇಶವನ್ನು ಈಗ ಪ್ರಸ್ತಾವ ಮಾಡಿದ್ದೇವೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ದಯಮಾಡಿ, ನಾವು ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇವೆ. ಮಾನ್ಯ ಕಂದಾಯ ಸಚಿವರು ಮತ್ತು ಕೃಷಿ ಇಲಾಖೆಯ ಸಚಿವರು, ಸಣ್ಣ ನೀರಾವರಿ ಇಲಾಖೆಯ ಸಚಿವರು, ಮುಖ್ಯ ಕಾರ್ಯದರ್ಶಿಯವರು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದು ಚರ್ಚಿಸಬೇಕು ಜಿಲ್ಲಾಧಿಕಾರಿಗಳಿಗೇನು ಭಯ ಬಂದಿದೆ ಎಂದರೆ, ಹೊಸ ಸರ್ಕಾರ ಬಂದಿದೆ. ಯಾವ ಯಾವ ಅಧಿಕಾರಿಗಳಿಗೆ ಯಾವಾಗ ವರ್ಗಾವಣೆ ಮಾಡುತ್ತಾರೋ, ಯಾವ ಯಾವ ಮಂತ್ರಿಗಳನ್ನು ಹಿಡಿಯಬೇಕು, ಯಾವ ಯಾವ ಜಾತಿಯವರನ್ನು ಹಿಡಿಯಬೇಕು. ಇದಕ್ಕೆ ಮಾರ್ಗ ಯಾವುದು ಎಂಬುದಾಗಿ ಮಾರ್ಗೋಪಾಯಗಳನ್ನು ಹುಡುಕುತ್ತಾರೆಯೇ ವಿನಹ ರೈತರಿಗೆ ಆಗಿರತಕ್ಕ ತೊಂದರೆಯನ್ನು ನೋಡುವುದಕ್ಕೆ ಅವರಿಗೆ ಕಣ್ಣಿಲ್ಲ. ಆ ಕಣ್ಣನ್ನು ತಾವು ಬಡಿದು ಎಚ್ಚರಿಸಬೇಕು. ಇವತ್ತು ತಾವು ಹೇಳಿದ್ದಿರಿ, ವರ್ಗಾವಣೆಯನ್ನು ಮಾಡುವುದಿಲ್ಲ. ಮಾರ್ಚ್‌ವರೆಗೆ ಮುಂದೆ ಹಾಕಿದ್ದೇವೆಂದು ಹೇಳಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ಆಡಳಿತ ಯಂತ್ರ , ಅದೇ ಅಧಿಕಾರಿಗಳು ನಮ್ಮ ಜೊತೆಯಲ್ಲಿದ್ದಂಥ ಪಿ. ಎಸ್. ಗಳು, ಪಿ. ಎ.ಗಳು ನಿಮ್ಮ ಹತ್ತಿರ ಬಂದಿರುತ್ತಾರೆ. ನಿಮ್ಮ ಹತ್ತಿರ ಇದ್ದವರು ನಮ್ಮ ಹತ್ತಿರ ಬರುತ್ತಾರೆ. ಅವರನ್ನು ಸರಿಯಾದ ರೀತಿಯಲ್ಲಿ ಎಬ್ಬಿಸಿ, ಕೆಲಸ ಮಾಡುವ ಜವಾಬ್ದಾರಿ ತಮ್ಮ ಮೇಲಿದೆ, ತಾವು ಮಾಡಬೇಕು. ಇದರಲ್ಲಿ ತಾವು ವಿಫಲರಾಗಿದ್ದೀರಿ. ಕೇಂದ್ರ ಸರ್ಕಾರದವರು ಹಣ ಕೊಡುವುದಕ್ಕೆ ತಯಾರು ಇದ್ದಾರೆ. ಕೇಂದ್ರ ಸರ್ಕಾರ ನಮ್ಮೊಟ್ಟಿಗೆ ಇದೆ. ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದವರು ಇಬ್ಬರು ಮಂತ್ರಿಗಳಿದ್ದಾರೆ. ಶ್ರೀನಿವಾಸ ಪ್ರಸಾದ್ ಇದ್ದಾರೆ, ಅನಂತ ಕುಮಾರ್ ಇದ್ದಾರೆ. ಅವರ ಮೂಲಕ ನೀವು ಪ್ರಧಾನಿಗಳ ಗಮನಕ್ಕೆ ವಿಷಯವನ್ನು ತರಬಹುದಿತ್ತು. ನೀವು ಅವರ ಸಂಪರ್ಕ ಮಾಡಿದ್ದೀರೋ ಹಣಕಾಸಿನ ಮಂತ್ರಿಗಳಾದ ಧನಂಜಯ ಕುಮಾರ್ ಇದ್ದಾರೆ, ನೀವು ಅವರ ಸಂಪರ್ಕ ಮಾಡಿದ್ದೀರೋ, ನಿಮ್ಮ ಪಕ್ಷದವರೇ ಲೋಕಸಭಾ ಸದಸ್ಯರಿದ್ದಾರೆ, ಅವರಿಗೆಲ್ಲಾ ವಿಷಯಗಳನ್ನು ತಿಳಿಸಿದ್ದೀರೋ, 25 ದಿನಗಳು ಆಗಿವೆ. ಆದ್ದರಿಂದ ದಯಮಾಡಿ, ತಾವು ಲೋಕ ಸಭಾ ಸದಸ್ಯರ ಗಮನಕ್ಕೆ ತರಬೇಕು. ಅದರ ಜೊತೆಗೆ ಕೇಂದ್ರದ, ನಮ್ಮ ರಾಜ್ಯದಿಂದ ಪ್ರತಿನಿಧಿಸತಕ್ಕ ಮಂತ್ರಿಗಳಿಗೆ ತಿಳಿಸಬೇಕು. ಪ್ರಧಾನ ಮಂತ್ರಿಗಳಿಗೆ ಇದನ್ನು ಮಾಡಬೇಕೆಂದು ನಾವು ಹೇಳುತ್ತೇವೆ. ನಾವು ಆ ಸರ್ಕಾರದಲ್ಲಿ ಭಾಗಿಗಳಾಗಿದ್ದೇವೆ. ಆ ಸರ್ಕಾರ ನಮ್ಮದು. ಕೊಡದೇ ಹೋದರೆ ನಾವು ಅವರ ದೃಷ್ಟಿಯಲ್ಲಿ ಹೋರಾಟ ಮಾಡುತ್ತೇವೆ. ಆ ಕೆಲಸವನ್ನು ತಾವು ಮಾಡಬೇಕೆಂಬ ದೃಷ್ಟಿಯಿಂದ ಇವತ್ತು ವಿಷಯವನ್ನು ನಾವು ನಿಲುವಳಿ ಸೂಚನೆ ಮುಖಾಂತರ ತಂದಿದ್ದೇವೆ. ಇದಕ್ಕೆ ಅಧ್ಯಕ್ಷರು ಅವಕಾಶ ಕೊಡದೇ ಹೋದರೂ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳು. ಸರ್ಕಾರ ಮಾತ್ರ ಈ ವಿಷಯದಲ್ಲಿ ಬಹಳ ಎಚ್ಚರಿಕೆಯನ್ನು ಮಾಡಬೇಕಾಗಿತ್ತು. ಆ ಎಚ್ಚರಿಕೆ ತೆಗೆದುಕೊಳ್ಳುವುದರಲ್ಲಿ ಎಲ್ಲೋ ದಾರಿ ತಪ್ಪುತ್ತಿದ್ದೀರಿ ಎಂಬ ಅನುಮಾನ ಬರುವಂತೆ ನಡೆದುಕೊಂಡಿದ್ದೀರಿ.

ಛೇರ್ಮನ್ : ಸನ್ಮಾನ್ಯ ಸದಸ್ಯರೇ, ಈಗಾಗಲೇ ಕಂದಾಯ ಸಚಿವರು, ಕೃಷಿ ಸಚಿವರು ಹೆಚ್ಚಿನ ಮಾಹಿತಿಯನ್ನು 11ನೇ ತಾರೀಖಿಗೆ ನೀಡುತ್ತೇವೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಪ್ರತಿಪಕ್ಷಗಳ ಸದಸ್ಯರ ಅಭಿಪ್ರಾಯವನ್ನು ಹಾಗೂ ಸರ್ಕಾರದ ವತಿಯಿಂದ ಸಚಿವರ ಹೇಳಿಕೆಗಳನ್ನು ಗಮನಿಸಿ ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿದ್ದೇನೆ. ಈಗ ಸದನವನ್ನು ಮುಂದೂಡುತ್ತೇನೆ. ಪುನ: ದಿನಾಂಕ 11-11-99 ರಂದು ಬೆಳಿಗ್ಗೆ 11 ಗಂಟೆಗೆ ಸಭೆಯನ್ನು ಕರೆಯಲಾಗಿದೆ.

(ಸದನವು ಮಧ್ಯಾಹ್ನ 12-30 ಗಂಟೆಗೆ ಮುಕ್ತಾಯಗೊಂಡು, ಪುನ: 11-11-99ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಲಿಲ್ಲ ಎಂದು ಸೂಚಿಸುತ್ತದೆ.